ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಚಿಕ್ಕಮಗಳೂರು


ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಚಿ. ಸ. ಪ್ರಭುಲಿಂಗ ಶಾಸ್ತ್ರಿ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**CHIKKAMAGALURU:** An Introducing Book on the Places in Karnataka that Played a Major Role in the Freedom Struggle, Written by Chi.Sa. Prabhuling Shashtri, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**

ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**

ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**

ಚಿ. ಸ. ಪ್ರಭುಲಿಂಗ ಶಾಸ್ತ್ರಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಚಿಕ್ಕಮಗಳೂರು ತಾಲ್ಲೂಕಿನ ಹೋರಾಟದ ಹೆಜ್ಜೆ ಗುರುತುಗಳನ್ನು ದಾಖಲಿಸುವ ಪುಸ್ತಕ ಸಿದ್ಧಪಡಿಸುವ ಪುಣ್ಯದ ಕೆಲಸವನ್ನು ನನ್ನ ಮೇಲೆ ಭರವಸೆಯಿಟ್ಟು ವಹಿಸಿರುವ ನನ್ನ ಸನ್ಮಿತ್ರರೂ ಆದ ಡಾ. ಬಿ. ವಿ. ವಸಂತಕುಮಾರ್, ರಿಜಿಸ್ಟ್ರಾರ್ ಎನ್. ಕರಿಯಪ್ಪ ಹಾಗೂ ಕೋಡಿಬೆಟ್ಟು ರಾಜಲಕ್ಷ್ಮೀ ಅವರಿಗೆ ಹೃತ್ಪೂರ್ವಕ ಧನ್ಯ ವಾದಗಳು.

ದೇಶದೆಲ್ಲೆಡೆ ಸ್ವರಾಜ್ಯದ ಧ್ವನಿ ಮೊಳಗಿದಾಗ ಸಹಜವಾಗಿಯೆ ಇಲ್ಲೂ ಹೋರಾಟಗಳು ನಡೆದಿವೆ. ಹಲವರು ವಿದ್ಯಾಭ್ಯಾಸ ನಿಲ್ಲಿಸಿದರೆ ಕೆಲವರು ಇದ್ದ ಉದ್ಯೋಗ ತ್ಯಜಿಸಿದ್ದಾರೆ. ಸ್ಥಾನಮಾನಗಳಿಗೆ ರಾಜೀನಾಮೆ ನೀಡಿ ಹೋರಾಟದಲ್ಲಿ ಪಾಲ್ಗೊಂಡವರು ಇದ್ದಾರೆ. ನೂರಾರು ಜನ ಪೊಲೀಸರ ಲಾಠಿ ಪೆಟ್ಟು ತಿಂದು ಜಗ್ಗದೆ ಸೆರೆವಾಸ ಅನುಭವಿಸಿದ್ದಾರೆ. ಮನೆ ಮಠ ಕಳೆದುಕೊಂಡು ಬೀದಿ ಪಾಲಾದ ಕುಟುಂಬಗಳು ಹಲವು ಇವೆ.

ಸ್ವಾತಂತ್ರ್ಯ ಹೋರಾಟ ನಮ್ಮ ಅಸ್ಮಿತೆ. ದೇಶಭಕ್ತಿಗೆ ಪ್ರತಿಫಲ ಪಡೆಯಬಾರದು ಎಂಬ ಆದರ್ಶ ಹೊತ್ತು ಹೋರಾಡಿ ಜೈಲು ಸೇರಿ ನೊಂದು ಬೆಂದು ಪರಿಶ್ರಮಿಸಿದ ಕೆಲವರು ಸ್ವಾತಂತ್ರ್ಯ ಭಾರತ ಸರ್ಕಾರ ಕೊಡ ಮಾಡಿದ ತಾಮ್ರಪತ್ರ, ಪಿಂಚಣಿ ಸೇರಿದಂತೆ ಹಲವು ಸೌಲಭ್ಯಗಳನ್ನು ತಿರಸ್ಕರಿಸಿದ ಆದರ್ಶವೂ ಇಲ್ಲಿ ಕಂಡುಬಂದಿರುವುದು ಹೆಮ್ಮೆಯ ಸಂಗತಿ.

ಮಹಾತ್ಮಾ ಗಾಂಧೀಜಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಮೇಲೆ ಇಲ್ಲಿ ಹೋರಾಟದ ಕಾವು ಪಡೆದಿದ್ದು ಸುಳ್ಳಲ್ಲ. ಆದರೆ ಅದಕ್ಕೂ ಮೊದಲು ಸಹ ಇಲ್ಲಿ ಚಳುವಳಿ ನಡೆದ ಹೆಜ್ಜೆ ಗುರುತುಗಳಿವೆ. ಅಹಿಂಸಾವಾದವಷ್ಟೇ ಅಲ್ಲ ಸ್ವಾತಂತ್ರ್ಯ ಗಳಿಕೆಗೆ ಶಸ್ತ್ರ ಹಿಡಿಯಬೇಕೆಂದು ಹಂಬಲಿಸಿದವರೂ ಇಲ್ಲಿದ್ದರು. ಅಖಂಡಭಾರತ ಕಲ್ಪನೆಗೆ ಬೆಂಬಲ

ವ್ಯಾಪಕವಾಗಿತ್ತು. ಅದಕ್ಕಾಗಿಯೆ ಸ್ವಾತಂತ್ರ್ಯ ಬಂದ ನಂತರವೂ ಮೈಸೂರು ಚಲೋದಲ್ಲಿ ದೊಡ್ಡಪ್ರಮಾಣದಲ್ಲಿ ಪಾಲ್ಗೊಂಡ ಪಡೆ ನಮ್ಮೂರಿನದು. ದಾಖಲಾತಿಯ ಕೊರತೆಯಿಂದಾಗಿ ನಮ್ಮಲ್ಲಿ ನಡೆದ ಹೋರಾಟದ ವಿವರಗಳು ಪ್ರಚುರಗೊಂಡಿಲ್ಲ. ಈ ಕೊರತೆ ಪತ್ರಕರ್ತನಾಗಿ ನಾಲ್ಕು ದಶಕಗಳಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನನ್ನನ್ನು ಕಾಡುತ್ತಿತ್ತು.

ಸರಿಸುಮಾರು ಶತಮಾನಗಳ ಹಿಂದಿನ ಸಂಗತಿಗಳನ್ನು ಸಂಗ್ರಹಿಸಲು ಹಲವರ ನೆರವು ಸ್ಮರಣೀಯ. ನನ್ನ ಆತ್ಮೀಯರಾದ ಸ. ಗಿರಿಜಾಶಂಕರ್, ಮಂಜುನಾಥಕಾಮತ್, ಪ್ರಭಾಕರಕಾರಂತ, ಡಾ. ಎಚ್. ಎಂ. ಮಹೇಶ್, ದೀಪಕ್‌ದೊಡ್ಡಯ್ಯ, ಡಾ. ಮಂಜುಳಾಹುಲ್ಲಳ್ಳಿ, ಗೌಡಳ್ಳಿಪ್ರಸನ್ನ, ಹರಿಹರಪುರ ಶಿವಸ್ವಾಮಿ, ಡಾ. ಬೆಳವಾಡಿ ಮಂಜುನಾಥ್, ಚಟ್ನಳ್ಳಿಮಹೇಶ್, ಸೂರಿಪ್ರಭು ಮತ್ತಿತರರ ಸಹಕಾರ ಮರೆಯಲಾಗದು. ವಿಷಯ ಸಂಗ್ರಹ, ಜೋಡಣೆ, ದಾಖಲಾತಿ, ಬೆರಳಚ್ಚು, ಕರಡು ತಿದ್ದುವುದು, ಕಾನೂನು ಸಲಹೆ ಸೇರಿದಂತೆ ಎಲ್ಲ ಹಂತದಲ್ಲೂ ನೆರವು ನೀಡಿದ ಮಾಧ್ಯಮ ಸಂಸ್ಕೃತಿ ಪ್ರತಿಷ್ಠಾನದ ಕಾರ್ಯದರ್ಶಿಯೂ ಆದ ನನ್ನ ಧರ್ಮಪತ್ನಿ ಎಂ. ಆರ್. ಸುಮಿತ್ರಾಶಾಸ್ತ್ರಿ ಪರಿಶ್ರಮ ಸ್ಮರಣೀಯ.

ತ್ಯಾಗ, ಬಲಿದಾನ, ಸಮರ್ಪಣಾ ಭಾವದ ಪ್ರಯತ್ನದಿಂದಾಗಿ ಸ್ವರಾಜ್ಯದ ಸವಿ ನಾವಿಂದು ಅನುಭವಿಸುತ್ತಿದ್ದೇವೆ. ಇದಕ್ಕೆ ಕಾರಣಕರ್ತರಾದ ನಮ್ಮ ಎಲ್ಲ ಹೋರಾಟಗಾರರಿಗೆ ನಮನಗಳು.

**ಶ್ರೀ ಚಿ. ಸ. ಪ್ರಭುಲಿಂಗಶಾಸ್ತ್ರಿ**

ಚಿಕ್ಕಮಗಳೂರು
– ೫೭೭ ೧೦೧

## ಪರಿವಿಡಿ

| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ | ೧೫–೫೨ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |

# ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

ಪ್ರಕೃತಿಯ ಪ್ರಯೋಗ ತಾಣವೋ ಎಂಬಂತಿದೆ ಚಿಕ್ಕಮಗಳೂರು ನಿಸರ್ಗ ಸೊಬಗು. ನಿತ್ಯ ಹರಿದ್ವರ್ಣದ ಹಸಿರು ಕಾಡುಗಳು, ದಕ್ಷಿಣ ಭಾರತದಲ್ಲೆ ಅತಿ ಎತ್ತರದ ಮುಳ್ಳಯ್ಯನಗಿರಿ ಸೇರಿದಂತೆ ಗಿರಿ ಕಂದರಗಳು, ಚಂದ್ರದ್ರೋಣ ಸೇರಿದಂತೆ ಪಶ್ಚಿಮಘಟ್ಟ ಪರ್ವತ ಶ್ರೇಣಿ, ತುಂಗಾ–ಭದ್ರ–ಯಗಚಿ–ಹೊನ್ನಮ್ಮನಹಳ್ಳ ಸೇರಿದಂತೆ ಹಲವು ನದಿಗಳ ಉಗಮ ಸ್ಥಾನ. ಕಾಫಿಯ ತವರು. ದತ್ತಾತ್ರೇಯ–ಅನಸೂಯದೇವಿ ನೆಲೆಗೊಂಡ ತಾಣ. ಮುತ್ತೋಡಿ ಅಭಯಾರಣ್ಯ ಜೊತೆಗೆ ಮುಗಿಲು ಮುತ್ತಿಕ್ಕುವ ಮರಗಿಡಗಳು, ಹುಲಿ, ಚಿರತೆ ಸೇರಿದಂತೆ ವನ್ಯಮೃಗಗಳ ಪ್ರಾಣಿ ಸಂಕುಲಗಳ ಜೀವ ವೈವಿಧ್ಯತೆಯ ತಾಣವಿದು. ಒಂಭತ್ತು ತಾಲ್ಲೂಕುಗಳಲ್ಲಿ ಏಳು ಮಲೆನಾಡು. ಕಡೂರು–ಅಜ್ಜಂಪುರ ತಾಲ್ಲೂಕುಗಳು ಮಾತ್ರ ಪೂರ್ಣ ಬಯಲು ಸೀಮೆ.

ಮಹಾತ್ಮಾಗಾಂಧೀಜಿ ಭೇಟಿ, ಮಾಸಾಶನ ನಿರಾಕರಿಸಿದ ಶಿವಾನಂದ ಮತ್ತು ಅಶ್ವಥ್‌ರ ಆದರ್ಶ, ಸಿ. ಎಂ. ಎಸ್. ಶಾಸ್ತ್ರಿ ತಂಡ ಬಾಂಬ್ ಸ್ಫೋಟ, ವಿದ್ಯುತ್–ದೂರವಾಣಿ ತಂತಿ ಕಿತ್ತು ಬ್ರಿಟಿಷ್ ಆಡಳಿತಕ್ಕೆ ಸೆಡ್ಡು ಹೊಡೆದದ್ದು, ಪಿಕೆಟಿಂಗ್‌ಗಳು, ಸೇಂದಿ ನಿರ್ನಾಮ ಚಳುವಳಿ, ಕಾನೂನು ಭಂಗಗೊಳಿಸಿ ನೂರಾರು ಮಂದಿ ಜೈಲು ಶಿಕ್ಷೆ ಅನುಭವಿಸಿ ಲಾಠಿ ಪೆಟ್ಟು ತಿಂದ ಪ್ರಕರಣಗಳು ಶಾಲೆ ತೊರೆದ ಹುಡುಗರು, ಹೋರಾಟದಿಂದ ಮನೆ–ಮಠ, ವ್ಯವಹಾರ–ವ್ಯಾಪಾರ ಕಳೆದುಕೊಂಡದ್ದು ಚಿಕ್ಕಮಗಳೂರು ತಾಲ್ಲೂಕಿನ ಉಲ್ಲೇಖನೀಯ ಸ್ವಾತಂತ್ರ್ಯ ಹೋರಾಟದ ಪ್ರಮುಖ ಹೆಜ್ಜೆ ಗುರುತುಗಳು.

ನಗರದ ಎಂ. ಜಿ. ರಸ್ತೆ ಬೇಲೂರು ರಸ್ತೆಯನ್ನು ಕೂಡುವ ಸುತ್ತಮುತ್ತಲ ವಿಶಾಲ ಮೈದಾನ ಹಿಂದೆ ಸ್ವಾತಂತ್ರ್ಯ ಹೋರಾಟದ ಪ್ರತಿಭಟನಾ ಸಭೆ ನಡೆಸುವ ಪ್ರಮುಖ ತಾಣಗಳಲ್ಲೊಂದಾಗಿತ್ತು. ರಾಷ್ಟ್ರ ನಾಯಕರಾದ ಬಾಬು ರಾಜೇಂದ್ರಪ್ರಸಾದ್, ಎನ್. ಜಿ. ರಂಗಾ ಇಲ್ಲಿ ಸ್ವಾತಂತ್ರ್ಯದ ಪ್ರಾಮುಖ್ಯತೆ

ಕುರಿತಂತೆ ಭಾಷಣ ಮಾಡಿದ್ದರು. ಈ ಪ್ರದೇಶ ಸ್ವಾತಂತ್ರ್ಯ ನಂತರ ವಿಸ್ತಾರದಲ್ಲಿ ಕುಗ್ಗುತ್ತಾ ಆಜಾದ್ ಮೈದಾನವೆಂದು ಪ್ರಖ್ಯಾತಿ ಪಡೆದಿತ್ತು. ಪ್ರಮುಖ ವಾಣಿಜ್ಯ ಸ್ಥಳವಾಗಿ ರೂಪುಗೊಂಡ ನಂತರ ಆಜಾದ್‌ಪಾರ್ಕ್ ಆಗಿ ಈಗಂತೂ ವೃತ್ತ – ಫೌಂಟನ್‌ಗೆ ಸೀಮಿತವಾಗಿದೆ.

ಚಿಕ್ಕಮಗಳೂರಿನ ಉಪಬಂಧಿಖಾನೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಹಿನ್ನಲೆಯಲ್ಲಿ ರಾಜ್ಯದ ಪ್ರಮುಖ ನಾಯಕರಾದ ಕೆ. ಟಿ. ಭಾಷ್ಯಂ, ಕೆ. ಸಿ. ರೆಡ್ಡಿ, ಟಿ. ಸುಬ್ರಮಣ್ಯಂ ಕೆಲಕಾಲ ಸೆರೆವಾಸ ಅನುಭವಿಸಿದ ಮಾಹಿತಿ ಇದೆ.

ಮಲೆನಾಡಿನ ಹವೆ ತಂಪು. ಜನರ ಭಾವನೆಯೂ ಅಷ್ಟೇ ಸಹೃದಯತೆಯಿಂದ ಕೂಡಿದೆ. ತಕ್ಷಣ ಸಿಡಿದೇಳುವ ಮನೋಭಾವ ಅಪರೂಪ. ಮೆದು ಮಣ್ಣಿನ ಜಿಲ್ಲೆಯ ಜನರೂ ಮೃದು ಮನದವರು. ಹಾಗಾಗಿಯೆ ಇಲ್ಲಿ ಯಾವುದೇ ಮಹತ್ವದ ಹೋರಾಟ–ಚಳುವಳಿ–ಹಿಂಸಾಚಾರ–ದೌರ್ಜನ್ಯ ಸಾಮೂಹಿಕವಾಗಿ ನಡೆದ ಇತಿಹಾಸ ಇಲ್ಲ. ಮಣ್ಣಿನ ಗುಣವೇ ಜನರಿಗೂ ಬಂದಿರಬಹುದು. ಸ್ವಾತಂತ್ರ್ಯ ಹೋರಾಟದ ಸಂದರ್ಭವೂ ಇದಕ್ಕೆ ಹೊರತಾಗಿಲ್ಲ. ಇಲ್ಲಿ ಮೈಸೂರು ಯದುವಂಶದ ರಾಜರ ಆಡಳಿತವೇ ಇತ್ತು. ಮೊಗಲರು–ಬ್ರಿಟಿಷರೂ ಸೇರಿದಂತೆ ಹೊರಗಿನವರ ದರೋಡೆ–ದೌರ್ಜನ್ಯಗಳು ಅಪರೂಪವೇ. ಆಡಳಿತಗಾರರು ಜನರ ಮನ ಅರಿತವರಾದ್ದರಿಂದ ಅತಿಯಾದ ಸಂಘರ್ಷದ ವಾತಾವರಣ ಸೃಷ್ಟಿ ಆಗಲಿಲ್ಲ.

ಶಿಲ್ಪಕಲಾ ಪೋಷಕರಾದ ಹೊಯ್ಸಳ ಅರಸರ ಮೂಲ ಸ್ಥಾನ ಈ ಜಿಲ್ಲೆ ಎಂಬುದು ಹೆಗ್ಗಳಿಕೆ. ಮೂಡಿಗೆರೆ ತಾಲ್ಲೂಕಿನ 'ಅಂಗಡಿ' ಗ್ರಾಮದಲ್ಲಿ ಶೂರ ಹೊಯ್ಸಳ ವಂಶದ ಮೂಲ ಪುರುಷ 'ಸಳ' ಹುಟ್ಟಿದ. ಸೊಸೆವೂರು ಎಂದು ಕರೆಯಲ್ಪಡುತ್ತಿದ್ದ 'ಅಂಗಡಿ'ಯನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸಿದ. ನಂತರ ದ್ವಾರಸಮುದ್ರಕ್ಕೆ ವರ್ಗಾಯಿಸಿದ.

ಕದಂಬರು, ಗಂಗರು, ನೊಣಂಬ, ತರ್ಯಲ್ಲ, ಸೇನವಾರ, ಸಾಂತರರು, ಚಾಲುಕ್ಯ, ಚೋಳ, ಹೊಯ್ಸಳ, ಬಲಮ್, ವಿಜಯನಗರ ಅರಸರು, ಕೆಳದಿ–ಇಕ್ಕೇರಿ ನಾಯಕರು, ಶೃಂಗೇರಿ ಜಾಗೀರ್, ತರೀಕೆರೆ ಪಾಳೇಗಾರರು, ಐಗೂರು ಪಾಳೇಗಾರರು, ಮೈಸೂರು ಅರಸರು ಜಿಲ್ಲೆಯ ಆಡಳಿತ ನಡೆಸಿದರು.



## 'ಮುಗುಳಿ' ಚಿಕ್ಕಮಗಳೂರಾಯಿತು

ಜಿಲ್ಲಾ ಕೇಂದ್ರ 'ಚಿಕ್ಕಮಗಳೂರು' ಕಿರಿಯ 'ಮುಗುಳಿ' ಎಂಬ ಹೆಸರಿನಿಂದ ಬಂದಿದೆ. 'ಮುಗುಳಿ' ಒಂದು ಸಸ್ಯದ ಹೆಸರು. ಅದು ವಿಷ ನಿರೋಧಕ ಎಂದು ಸಸ್ಯಶಾಸ್ತ್ರಜ್ಞ ಡಾ. ಪಿ. ಸತ್ಯನಾರಾಯಣಭಟ್ ಪ್ರತಿಪಾದಿಸುತ್ತಾರೆ. ಸಖರಾಯಪಟ್ಟಣದ ರಾಜ ರುಕ್ಮಾಂಗದ ತನ್ನ ಕಿರಿಯ ಮಗಳಿಗೆ ಬಳುವಳಿಯಾಗಿ ನೀಡಿದ ಊರು ಚಿಕ್ಕಮಗಳೂರು ಎಂಬ ಪೌರಾಣಿಕ ಅಂಶವು ಪ್ರಚಲಿತದಲ್ಲಿದೆ.

೧೭೯೯ರಲ್ಲಿ ಮೈಸೂರು ಒಡೆಯರು ಪುನಃ ಅಧಿಕಾರ ಪಡೆದಾಗ ಚಿಕ್ಕಮಗಳೂರು ಜಿಲ್ಲೆಯೂ ಅವರ ವ್ಯಾಪ್ತಿಗೆ ಸೇರಿಕೊಂಡಿತ್ತು. ೧೮೬೩ರಲ್ಲಿ ಕಡೂರು ಜಿಲ್ಲೆಯನ್ನು ರಚಿಸಿ ಕಡೂರು ಪಟ್ಟಣವನ್ನು ಜಿಲ್ಲಾ ಕೇಂದ್ರವಾಗಿ ಮಾಡಲಾಯಿತು. ೧೮೬೫ರಲ್ಲಿ ಚಿಕ್ಕಮಗಳೂರನ್ನು ಜಿಲ್ಲಾ ಕೇಂದ್ರವನ್ನಾಗಿಸಲಾಯಿತು. ೧೮೮೬ರಲ್ಲಿ ಚಿಕ್ಕಮಗಳೂರು ಜಿಲ್ಲೆ ಈಗಿನ ಸ್ವರೂಪ ಪಡೆಯಿತು. ೧೯೪೭ರವರೆಗೂ ಈ ಜಿಲ್ಲೆಯನ್ನು ಕಡೂರು ಜಿಲ್ಲೆಯೆಂದೇ ಗುರುತಿಸುತ್ತಿದ್ದು, ಸ್ವಾತಂತ್ರ್ಯಾನಂತರ 'ಚಿಕ್ಕಮಗಳೂರು ಜಿಲ್ಲೆ' ಎಂದು ಹೆಸರು ಬದಲಾಯಿಸಲಾಯಿತು.

೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಪೂರ್ವದಲ್ಲೆ ಬ್ರಿಟಿಷರ ವಿರುದ್ಧ ಹೋರಾಟ ನಡೆದ ಇತಿಹಾಸವು ಜಿಲ್ಲೆಗಿದೆ. ತರೀಕೆರೆ ಪಾಳೇಗಾರರ ಸರ್ಜಾ ಹನುಮಪ್ಪ ನಾಯಕ ೧೭೮೦ರಲ್ಲಿ ಪಟ್ಟಕ್ಕೆ ಬಂದ. ಹೈದರಾಲಿ ಇವನನ್ನು ಮಣಿಸಿ ೧೮,೦೦೦ ವರಹ ಪೊಗದಿ ನಿಗದಿ ಮಾಡುತ್ತಾನೆ. ಅಷ್ಟು ದೊಡ್ಡ ಮೊತ್ತ ಪೊಗದಿ ನಾಯಕನಿಗೆ ಕೊಡಲಾಗುವುದಿಲ್ಲ. ಆಗ ತರೀಕೆರೆಯನ್ನು ವಶಪಡಿಸಿಕೊಂಡ ಹೈದರಾಲಿ ೧೭೮೦ ವರಹ ಆದಾಯದ ಮುಂಜರಾಬಾದ್ ಪ್ರಾಂತ್ಯವನ್ನು ಆಳಲು ನೇಮಿಸಿದ. ತರೀಕೆರೆಯಿಂದಲೇ ಹನುಮಪ್ಪ ಇಂದಿನ ಸಕಲೇಶಪುರ ಪ್ರಾಂತ್ಯವನ್ನು ಆಳುತ್ತಿದ್ದ. ನಂತರ ಕೃಷ್ಣಪ್ಪನಾಯಕ ಸರ್ಜಾ ರಂಗಪ್ಪನಾಯಕ, ಸರ್ಜಾ ಹನುಮಂತಪ್ಪ ನಾಯಕರುಗಳು ತರೀಕೆರೆಯನ್ನು ಆಳಿದರು.

ಶ್ರೀರಂಗಪಟ್ಟಣದಲ್ಲಿ ಬ್ರಿಟಿಷರ ದಂಡು ಬೀಡು ಬಿಟ್ಟಿದ್ದನ್ನು ಈ ವಂಶದ ರಂಗಪ್ಪನಾಯಕ ಮತ್ತು ಅವನ ಮಗ ಸರ್ಜಾ ಹನುಮಪ್ಪನಾಯಕರು ವಿರೋಧಿಸಿದರು. ೧೮೩೦ರ ನಗರ ದಂಗೆಯಲ್ಲಿ ಪಾಲ್ಗೊಂಡರು. ಅದು 'ರಂಗನಾಯಕನ ಅಡಾವುಡಿ' ಎಂದೂ ಹೆಸರಾಯಿತು. ಬ್ರಿಟಿಷರು ಈ

ದಂಗೆಯನ್ನು ಅಡಗಿಸಿ ಸರ್ಜಾ ಹನುಮಪ್ಪ ನಾಯಕನನ್ನು ಸೆರೆಹಿಡಿದು ೧೮೩೪ರಲ್ಲಿ ಬೆಂಗಳೂರಿನಲ್ಲಿ ಗಲ್ಲಿಗೇರಿಸಿದರು. ರಂಗಪ್ಪನಾಯಕ ಮಾತ್ರ ಶತ್ರುಗಳೊಂದಿಗೆ ಹೋರಾಡುತ್ತಾ ಮಡಿದ ಶೌರ್ಯದ ಇತಿಹಾಸ ಈ ಮಣ್ಣಿಗಿದೆ.

ಐಗೂರು ಪಾಳೇಗಾರರು ಬ್ರಿಟಿಷರ ವಿರುದ್ಧ ಹೋರಾಡುತ್ತಾರೆ. ಸಕಲೇಶಪುರ ತಾಲ್ಲೂಕಿನ ಐಗೂರು ರಾಜಧಾನಿಯಾಗಿಸಿಕೊಂಡ 'ಬಲ್ಲಮ್' ರಾಜ್ಯ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಬಹುಭಾಗವನ್ನು ಆವರಿಸಿತ್ತು. ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಅವರ ದೌರ್ಜನ್ಯವನ್ನು ವಿರೋಧಿಸಿ ಹೋರಾಡುತ್ತಾರೆ. ಐಗೂರು ಮನೆತನ ಬ್ರಿಟಿಷರ ವಿರುದ್ಧವೂ ಹೋರಾಡಿತು. ೧೮೦೨ರಲ್ಲಿ ಈ ಮನೆತನದ ಕೊನೆಯ ನಾಯಕನನ್ನು ಬ್ರಿಟಿಷ್ ಸೈನಿಕರು ಮೂಡಿಗೆರೆ ತಾಲ್ಲೂಕಿನ ಉಗ್ಗೇಹಳ್ಳಿಯಲ್ಲಿ ಸೆರೆ ಹಿಡಿದು ಗಲ್ಲಿಗೇರಿಸುತ್ತಾರೆ.

## ಧೀರ ದೋಂಡಿಯಾವಾಘಗೆ ಬಲ

ಚನ್ನಗಿರಿಯಲ್ಲಿ ಮರಾಠಿ ಕುಟುಂಬದಲ್ಲಿ ಹುಟ್ಟಿ ಹೈದರಾಲಿ ಸೇನೆ ಸೇರಿ ಸ್ವತಂತ್ರ ಆಡಳಿತದ ಕನಸು ಹೊಂದಿದ ಧೀರ ದೋಂಡಿಯಾವಾಘ ಸ್ವಯಂ ಆಡಳಿತದ ಕಿಚ್ಚು ಹಚ್ಚಿಕೊಂಡು ಸೇನೆಕಟ್ಟಿ ಹೋರಾಡಿ ಟಿಪ್ಪುವಿನಿಂದ ಸೆರೆ ಹಿಡಿಯಲ್ಪಟ್ಟ. ಶ್ರೀರಂಗಪಟ್ಟಣದಲ್ಲಿ ಐದು ವರ್ಷ ನೆಲ ಮಾಳಿಗೆಯ ಕಾರಾಗೃಹದಲ್ಲಿದ್ದು, ಟಿಪ್ಪು ಸೋಲಿನ ನಂತರ ತಪ್ಪಿಸಿಕೊಂಡು ಬಂದವ ಚಿಕ್ಕಮಗಳೂರು ತಾಲ್ಲೂಕಿನ ಸೆರಗಿನಲ್ಲಿರುವ ತರೀಕೆರೆ–ಬೀರೂರು–ಅಜ್ಜಂಪುರ ಭಾಗಗಳಲ್ಲಿ ಸಂಚರಿಸಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಯುವಕರನ್ನು ಎಚ್ಚರಿಸಿ ತನ್ನ ಸೇನೆಗೆ ಸೇರಿಸಿಕೊಳ್ಳುತ್ತಾ ಮುಂದೆ ಸಾಗಿ ಶಿಕಾರಿಪುರ ಕೋಟೆ ವಶಪಡಿಸಿಕೊಂಡ ಇತಿಹಾಸವಿದೆ. ದೋಂಡಿಯಾಗೆ ನಮ್ಮ ಜಿಲ್ಲೆಯ ಹಲವು ಯುವಕರು ಸಾಥ್ ನೀಡಿದ್ದು ಇತಿಹಾಸ.

೨೦ನೆಯ ಶತಮಾನದ ಆರಂಭದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧದ ಹೋರಾಟದ ಮುಂಚೂಣಿಯಲ್ಲಿದ್ದವರು ಹೊಸಕೊಪ್ಪದ ಕೃಷ್ಣರಾವ್, ಬೀರೂರಿನ ಕೆ. ಟಿ. ಸತ್ಯನಾರಾಯಣ ಜೊತೆಗಾರರು. ನಂತರ ಅಜ್ಜಂಪುರದ ಸುಬ್ರಮಣ್ಯ ಶ್ರೇಷ್ಠಿ, ಚಿಕ್ಕಮಗಳೂರಿನ ಸಿ. ಎಂ. ಎಸ್. ಶಾಸ್ತ್ರಿ, ಎಸ್. ಅಣ್ಣಪ್ಪಶೆಟ್ಟಿ, ಶಂಕರಪ್ಪ, ಧ್ರುವ ಮತ್ತಿತರರ ಗುಂಪು ಕ್ರಿಯಾಶೀಲವಾಗಿದ್ದು ಕಂಡು ಬರುತ್ತದೆ.



೧೯೨೭ರಲ್ಲಿ ಮಹಾತ್ಮಾ ಗಾಂಧೀಜಿ ತರೀಕೆರೆ, ಬೀರೂರು, ಕಡೂರು ಮತ್ತು ಚಿಕ್ಕಮಗಳೂರಿಗೆ ಭೇಟಿ ನೀಡಿ ಕಾಂಗ್ರೆಸ್ ಹೋರಾಟದ ಬಗ್ಗೆ ಜಾಗೃತಿ ಮೂಡಿಸಿದ್ದು ಉಲ್ಲೇಖನೀಯ. ಹೋಬಳಿ ಕೇಂದ್ರ ಅಜ್ಜಂಪುರದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಾವೇಶ ಆಯೋಜಿಸಿದ್ದು ಬ್ರಿಟಿಷ್ ಸರ್ಕಾರ ನಿಷೇಧಾಜ್ಞೆ ಹೊರಡಿಸಿ ತಡೆ ಒಡ್ಡಿದಾಗ ನಾಲ್ಕೈದು ಕಿ.ಮೀ. ದೂರದ ಪುಟ್ಟ ಗ್ರಾಮ 'ಚನ್ನಾಪುರ' ನಾಗವಂಗಲ ಮಧ್ಯದ ದಿಬ್ಬದ ಮೇಲೆ 'ವಿಜಯ ಮೈದಾನ' ನಿರ್ಮಿಸಿ ಅಲ್ಲಿ ಅದ್ದೂರಿ ಸಮಾವೇಶ ನಡೆಸಿ ಸೇಡು ತೀರಿಸಿಕೊಂಡ ಘಟನೆ ಚಿಕ್ಕಮಗಳೂರು ಗೆಜೆಟ್‌ನಲ್ಲಿ ಬಂದಿದೆ.

## ಪತ್ರಿಕೆಗಳಿಂದ ಸ್ಫೂರ್ತಿ

ಜಿಲ್ಲೆಯ ರೈಲ್ವೆ ಸಂಪರ್ಕ ಹೊಂದಿದ ಬಯಲು ಪ್ರದೇಶದಲ್ಲಿ ಹೋರಾಟದ ಕಾವು ಸ್ವಲ್ಪ ಮಟ್ಟಿನ ತೀವ್ರತೆ ಪಡೆದಿತ್ತು. ಪತ್ರಿಕೆಗಳನ್ನು ಓದಿ ಜಿಲ್ಲೆಯ ಒಂದಷ್ಟು ಪ್ರಜ್ಞಾವಂತರು ಆಳ್ವಿಕೆಯ ವಿರುದ್ಧ ಆಲೋಚಿಸಲು ಪ್ರಾರಂಭಿಸಿದರು. ವಿಶೇಷವಾಗಿ ತಿ. ತಾ. ಶರ್ಮರ 'ವಿಶ್ವ ಕರ್ನಾಟಕ', 'ಸಂಯುಕ್ತ ಕರ್ನಾಟಕ' ಮುಂಚೂಣಿಯಲ್ಲಿತ್ತು. ರಾಷ್ಟ್ರೀಯ ಆಂದೋಲನ ಎನಿಸಿಕೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸ್ ಜೊತೆಗೆ ಬಹುತೇಕ ಪ್ರಮುಖರು ಗುರುತಿಸಿಕೊಂಡಿದ್ದರು.

ಕಾಂಗ್ರೆಸ್ ಆಡಳಿತದ ಸಣ್ಣಪುಟ್ಟ ಲೋಪಗಳನ್ನು ಗುರುತಿಸಿ ಮನವಿ ಸಲ್ಲಿಸುವ ಕೆಲಸವನ್ನಷ್ಟೇ ಮಾಡುತ್ತಿತ್ತೆ ಹೊರತು ದೊಡ್ಡ ಮಟ್ಟದ ಜನಾಂದೋಲನ ನಡೆಸಲಿಲ್ಲ. ೧೯೨೯ರ ಲಾಹೋರ್ ಕಾಂಗ್ರೆಸ್ ಮಹಾ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯದ ನಿರ್ಣಯ ಕೈಗೊಂಡ ನಂತರವಷ್ಟೇ ಕಾಂಗ್ರೆಸ್ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಶುರುವಾಯಿತು. ಉಗ್ರಗಾಮಿ ಎನಿಸಿಕೊಂಡವರು ಕ್ರಾಂತಿಕಾರಿಗಳಷ್ಟೇ ಹಿಂದಿನಿಂದಲೂ ಹೋರಾಟ ನಡೆಸುತ್ತಿದ್ದರೆಂಬುದು ನನ್ನ ಅಭಿಮತ.

೨೦ನೆಯ ಶತಮಾನದ ಆರಂಭದಲ್ಲಿ ಗುರುತಿಸಬಹುದಾದಂತ ಒಂದಷ್ಟು ಚಟುವಟಿಕೆಗಳು ಚಿಕ್ಕಮಗಳೂರಿನಲ್ಲಿ ನಡೆದವು. ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಮೈಸೂರು ಮತ್ತಿತರ ಕಡೆ ತೆರಳಿದ್ದ ಹುಡುಗರಿಗೆ ದೇಶದ ಉತ್ತರ ಭಾಗದಲ್ಲಿ ಹೋರಾಟ ನಡೆಯುತ್ತಿದ್ದ ಮಾಹಿತಿ ಆಸಕ್ತಿ ಕೆರಳಿಸುತ್ತದೆ. ವೃತ್ತ ಪತ್ರಿಕೆಗಳು ಜಿಲ್ಲೆಗೆ ಬರಲು ಪ್ರಾರಂಭಿಸಿದ ಮೇಲೆ ಒಂದಷ್ಟು ಮಂದಿ ಪ್ರಭಾವಿತರಾದರು. ಹೊರಗಿನ ದೊಡ್ಡನಾಯಕರಾರೂ

ಆರಂಭದಲ್ಲಿ ಇಲ್ಲಿ ಹೋರಾಟವನ್ನು ಬಡಿದೆಬ್ಬಿಸಿದ ಕುರುಹುಗಳಿಲ್ಲ. ದೇಶ ಪ್ರೇಮ, ಆದರ್ಶ, ತಿಲಕ್, ಗಾಂಧಿ, ಬೋಸ್ ಹಲವರನ್ನು ಸೆಳೆದಿದ್ದು ಒಂದಷ್ಟು ಹೋರಾಟಕ್ಕೆ ನಾಂದಿಯಾಯಿತು.

ಅಸ್ಪೃಶ್ಯತೆಯ ವಿರುದ್ಧ ಹೋರಾಟ, ಸೇಂದಿ ಮತ್ತು ಗಂಧದ ಮರಗಳನ್ನು ಕಡಿಯುವುದು, ರೈಲ್ವೆಹಳಿ ಧ್ವಂಸ, ಟೆಲಿಫೋನ್ ತಂತಿ ಕತ್ತರಿಸುವುದು, ಧ್ವಜ ಹಿಡಿದು ಪ್ರಭಾತ್‌ಭೇರಿ ನಡೆಸುವುದು, ವಿದೇಶಿ ವಸ್ತ್ರ ಮತ್ತು ವಸ್ತು ಬಹಿಷ್ಕಾರ. ವಿದೇಶಿ ಪಟಾಕಿಗಳ ಬಹಿಷ್ಕಾರ. ಚರಕದಿಂದ ನೂಲು ತೆಗೆದು ಖಾದಿವಸ್ತ್ರ ಬಳಕೆ ಬಹುತೇಕ ಕಡೆ ಹೋರಾಟ ಎನಿಸಿಕೊಳ್ಳುತ್ತದೆ.

೧೯೪೦ರ ನಂತರ ಅಲ್ಲಲ್ಲಿ ಬ್ರಿಟಿಷ್‌ರ ವಿರುದ್ಧ ಪ್ರತಿಭಟನಾ ಸಭೆಗಳು, ಧ್ವಜ ಮೆರವಣಿಗೆ, ಪಿಕೆಟಿಂಗ್, ಶಾಲಾ ಬಹಿಷ್ಕಾರ, ವಿದ್ಯಾರ್ಥಿಗಳ ಮೆರವಣಿಗೆಗಳು ಅಲ್ಲಲ್ಲಿ ವ್ಯಾಪಕವಾಗಿ ನಡೆದವು. ಚಿಕ್ಕಮಗಳೂರು, ಕಳಸಾಪುರ, ಕಡೂರು, ನಿಡಘಟ್ಟ, ಮತ್ತಿಘಟ್ಟ, ಬೀರೂರು, ಅಜ್ಜಂಪುರ, ಹೆಬ್ಬೂರು, ಬಂಕನಕಟ್ಟೆ, ಶಿವನಿ, ತರೀಕೆರೆ, ಮೂಡಿಗೆರೆ, ದೇವವೃಂದ, ಬಣಕಲ್, ಕೊಪ್ಪ, ಹರಿಹರಪುರ, ಅಸಗೋಡು ಪ್ರಮುಖ ಹೋರಾಟ ಕೇಂದ್ರಗಳಾಗಿದ್ದವು. ೧೯೩೨ರಲ್ಲಿ ಗಾಂಧೀಜಿ ಕರ ನಿರಾಕರಣೆ–ಆಜ್ಞಾ ಭಂಗಕ್ಕೆ ಕರೆ ನೀಡಿದ ನಂತರವೇ ಹೋರಾಟದಲ್ಲಿ ಸ್ವಲ್ಪ ಮಟ್ಟಿಗೆ ಬಿರುಸು ಕಂಡುಬರುತ್ತದೆ.

ಬೀದರ್‌ನಿಂದ ಆರಂಭಗೊಂಡು ಹೈದರಾಬಾದ್–ಕರ್ನಾಟಕ, ಮುಂಬೈ–ಕರ್ನಾಟಕಗಳಲ್ಲಿ ನಡೆದ ಹೋರಾಟ ಕೇಳಿ ರೋಮಾಂಚನವಾಗುತ್ತದೆ. ಕರಾವಳಿ ಮತ್ತು ಮಧ್ಯ ಕರ್ನಾಟಕದ ಹೋರಾಟವೂ ಕಡಿಮೆಯೆನಿಸದು. ಆದರೆ ನನ್ನ ಜಿಲ್ಲೆಯ ವಿಷಯಕ್ಕೆ ಬಂದರೆ ಇಲ್ಲಿ ಅಂತಹ ಚರಿತ್ರಾರ್ಹ ಹೋರಾಟ ನಡೆಯದಿದ್ದರೂ ಚಳುವಳಿಯ ಕಾವು ಇತ್ತು. ನೂರಾರು ಮಂದಿ ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದು, ಮನೆ–ಮಠ ಕಳೆದುಕೊಂಡಿದ್ದು, ಶಾಲಾ ಕಾಲೇಜು–ಸಣ್ಣಪುಟ್ಟ ನೌಕರಿ ಕಳೆದುಕೊಂಡಿದ್ದು ಕಳೆದ ನಾಲ್ಕೈದು ತಿಂಗಳುಗಳಿಂದ ಇದೇ ವಿಚಾರವಾಗಿ ಜಿಲ್ಲಾದ್ಯಂತ ಕ್ಷೇತ್ರ ಪ್ರವಾಸ ಮಾಡಿದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂತು.

## ಹೋರಾಟದ ಸ್ಮೃತಿಗಳಲ್ಲಿ ಉಲ್ಲೇಖ

ಸ್ವಾತಂತ್ರ್ಯ ಹೋರಾಟದ ರಜತ ಮಹೋತ್ಸವದಲ್ಲಿ ಇತಿಹಾಸ ಸಂಶೋಧಕ



ಡಾ. ಸೂರ್ಯನಾಥ ಕಾಮತ್ ೨೫ನೆಯ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಸಂಪಾದಿಸಿದ 'ಸ್ವಾತಂತ್ರ್ಯ ಹೋರಾಟದ ಸ್ಮೃತಿಗಳು' ಕೃತಿಯಲ್ಲಿ ಹತ್ತಾರು ಪುಟಗಳು ಮಾತ್ರ ನೋಡಬಹುದು. ಕೆಲವು ಹೋರಾಟಗಾರರ ಕುರಿತು ಪ್ರತ್ಯೇಕ ಕಿರುಹೊತ್ತಿಗೆ ಬಂದಿದೆ. ಕೊಪ್ಪ ತಾಲ್ಲೂಕಿನ ಹೋರಾಟಗಾರರ ನೆನಪಿಸಿಕೊಳ್ಳುವ ಸಣ್ಣ ಪುಸ್ತಕ ಹೊರತುಪಡಿಸಿದರೆ ಚಿಕ್ಕಮಗಳೂರು ಜಿಲ್ಲೆಯ ಹೋರಾಟದ ಬಗ್ಗೆ ಉಲ್ಲೇಖನೀಯ ಕೃತಿಗಳು ಕಾಣ ಸಿಗುವುದಿಲ್ಲ. ಜಿಲ್ಲೆಯ ಹಿರಿಮೆ–ಗರಿಮೆಯ ಬಗ್ಗೆ ಹಮ್ಮು–ಬಿಮ್ಮು ಹೊಂದಿರುವ ನಾನು ಜಿಲ್ಲೆಯ ಕುರಿತಂತೆ ಒಂದಷ್ಟು ದಾಖಲಾತಿಗಳನ್ನು ಕಲೆ ಹಾಕುವ ಆಸಕ್ತಿ ಹೊಂದಿದವನು. ಹಲವರ ಸಹಕಾರ–ಅವಕಾಶವೂ ಲಭ್ಯವಾಗಿದ್ದು ಯೋಗವೇ ಸರಿ.

## ಗಾಂಧೀಜಿ ಪ್ರವೇಶ

ನಡೆದಾಡುವ ಸಂತ, ನುಡಿದಂತೆ ನಡೆಯುವ ಧ್ಯೇಯವಾದಿ ಅಹಿಂಸೆ ಪರೋಮೋ ಧರ್ಮವೆಂದು ಪರಿಭಾವಿಸಿದ ಮಹಾತ್ಮಾ ಗಾಂಧೀಜಿ ಬ್ಯಾರಿಸ್ಟರ್ ಪದವಿಯ ನಂತರ ಭಾರತಕ್ಕೆ ಹಿಂತಿರುಗಿದ್ದು ಸ್ವಾತಂತ್ರ್ಯ ಹೋರಾಟದ ದಿಕ್ಕನ್ನು ಬದಲಿಸಿತು. ದೂರದೃಷ್ಟಿ ಆಲೋಚನೆಯ ಮೋಹನದಾಸ ಕರಮಚಂದ ಗಾಂಧಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವ ಹಿಡಿದ ಮೇಲೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಬಲಗೊಳ್ಳುತ್ತದೆ. ಹದಿನಾರು ಬಾರಿ ಗಾಂಧೀಜಿ ಕರ್ನಾಟಕ ಪ್ರವಾಸ ಕೈಗೊಳ್ಳುತ್ತಾರೆ. ಹೋರಾಟದ ಜೊತೆಗೆ ಸಮಾಜ ಸುಧಾರಣೆಯ ಹಲವು ಸಂಗತಿಗಳ ಬಗ್ಗೆ ಜನಾಭಿಪ್ರಾಯ ರೂಢಿಸುವುದು, ನಿಧಿ ಸಂಗ್ರಹ, ವಿವಿಧ ಸ್ತರದ ಪ್ರಮುಖರನ್ನು ಹೋರಾಟಕ್ಕೆ ಜೋಡಿಸುವ ಕಾರ್ಯಗಳಲ್ಲಿ ತೊಡಗಿರುವುದು ಬೆಂಗಳೂರಿನಲ್ಲಿರುವ ಭವ್ಯವಾದ 'ಗಾಂಧಿ ಸ್ಮಾರಕ ಭವನ'ದ ದಾಖಲೆಗಳು ಸಾರುತ್ತಿವೆ.

೧೯೨೭ರ ಆಗಸ್ಟ್ ತಿಂಗಳಿನಲ್ಲಿ ಮಹಾತ್ಮಾ ಗಾಂಧೀಜಿ ಅವರು ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡುತ್ತಾರೆ. ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ನಿಧಿ ಸಂಗ್ರಹಣೆ ಪ್ರಮುಖ ಉದ್ದೇಶವಾಗಿತ್ತು. ಶಿವಮೊಗ್ಗವನ್ನು ಕೇಂದ್ರವಾಗಿಟ್ಟುಕೊಂಡು ಮಧ್ಯ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಆಗಸ್ಟ್ ೧೮ರ ಬೆಳಗ್ಗೆ ಶಿವಮೊಗ್ಗದಿಂದ ಕಾರಿನಲ್ಲಿ ಪ್ರಯಾಣಿಸಿ ಭದ್ರಾವತಿಯ ಮೂಲಕ ಜಿಲ್ಲೆಯನ್ನು ಪ್ರವೇಶಿಸುತ್ತಾರೆ. ತರೀಕೆರೆ ಪಟ್ಟಣದಲ್ಲಿ ಊರಿನ ಪ್ರಮುಖರು ಗಾಂಧೀಜಿ ಅವರನ್ನು ಖಾದಿ ಹಾರ ಹಾಕಿ ಸ್ವಾಗತಿಸುತ್ತಾರೆ.

ಸ್ವಲ್ಪ ನಿಧಿಯನ್ನೂ ಅರ್ಪಿಸುತ್ತಾರೆ. ವಿವರಗಳ ದಾಖಲಾತಿ ಈ ಬಗ್ಗೆ ಹೆಚ್ಚಾಗಿ ಸಿಗುತ್ತಿಲ್ಲ.

### ಬೀರೂರಿನಲ್ಲಿ ಭೋಜನ

ತರೀಕೆರೆಯಿಂದ ಬೀರೂರಿಗೆ ಬಂದ ಗಾಂಧೀಜಿ ಅವರನ್ನು ಪುರ ಪ್ರಮುಖರು ಬರ ಮಾಡಿಕೊಳ್ಳುತ್ತಾರೆ. ಆಗಿನ ಕಾಲದಲ್ಲಿ ಅಲ್ಲಿನ ರಾಜಕಾರಣದಲ್ಲಿ ಪ್ರಮುಖರಾಗಿದ್ದ ಕಾಂಗ್ರೆಸ್ ಚಳುವಳಿಯಲ್ಲೂ ಗುರುತಿಸಿಕೊಂಡಿದ್ದ ಕೆ. ಟಿ. ಸತ್ಯನಾರಾಯಣ ಶೆಟ್ಟರ ಮನೆಯಲ್ಲಿ ಭೋಜನ ಸ್ವೀಕರಿಸಿ ಸ್ವಲ್ಪ ಸಮಯ ವಿಶ್ರಮಿಸುತ್ತಾರೆ. ಕೆಲ ಸಮಯ ಸ್ಥಳೀಯ ವಿದ್ಯಮಾನಗಳ ಕುರಿತಂತೆ ಮಾಹಿತಿ ಸಂಗ್ರಹಿಸುತ್ತಾರೆಂದು ಖ್ಯಾತ ಲೇಖಕ ಅಜ್ಜಂಪುರ ಮಂಜುನಾಥ್ ಉಲ್ಲೇಖಿಸುತ್ತಾರೆ.

### ಕಡೂರಿನಲ್ಲಿ ಸಭೆ

ಜಿಲ್ಲಾ ಕೇಂದ್ರವಾಗಿದ್ದ ಕಡೂರು ಪಟ್ಟಣಕ್ಕೆ ಇಳಿ ಹೊತ್ತಿನಲ್ಲಿ ಗಾಂಧೀಜಿ ಬರುತ್ತಾರೆ. ಅಲ್ಲಿ ತಾಲ್ಲೂಕು ಕಛೇರಿಗೆ ಭೇಟಿ ನೀಡಿ ಆವರಣದಲ್ಲಿ ಸಭೆ ನಡೆಸುತ್ತಾರೆ. ಸ್ಥಳೀಯರು ಸ್ವಲ್ಪ ಹಣವನ್ನು ಗಾಂಧೀಜಿ ಸಂಗ್ರಹಿಸುತ್ತಿದ್ದ ನಿಧಿಗೆ ಸಮರ್ಪಿಸುತ್ತಾರೆ. ಅಜ್ಜಂಪುರ ಸೇರಿದಂತೆ ವಿವಿಧೆಡೆಯಿಂದ ಗಾಂಧೀಜಿ ದರ್ಶನಕ್ಕಾಗಿ ಗುಂಪು ಗುಂಪಾಗಿ ಜನ ಬಂದು ನೆರೆದಿರುತ್ತಾರೆ. ಕೆಲ ನಿಮಿಷಗಳ ಪ್ರೇರಣಾದಾಯಕ ಮಾತುಗಳನ್ನು ಆಲಿಸಿ ಸ್ಫೂರ್ತಿ ಪಡೆಯುತ್ತಾರೆ. ಇಲ್ಲಿ ಗಾಂಧೀಜಿ ಮಾತನಾಡುತ್ತಿರುವ ಭಾವಚಿತ್ರ ಹೊರತುಪಡಿಸಿದರೆ ಬೇರ್‍ಯಾವುದೇ ದಾಖಲೆಗಳು ಸಿಗುತ್ತಿಲ್ಲ.

### ಚಿಕ್ಕಮಗಳೂರಲ್ಲಿ ಗಾಂಧೀಜಿ

ಅಂದು ಸಂಜೆ ಚಿಕ್ಕಮಗಳೂರು ನಗರಕ್ಕೆ ಬಂದ ಗಾಂಧೀಜಿ ಅವರನ್ನು ಹೋರಾಟಗಾರರ ತಂಡದ ಜೊತೆಗೆ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸ್ವಾಗತಿಸುತ್ತಾರೆ. ಊರಿನ ಪ್ರಮುಖರಾಗಿದ್ದ ನಾಗಪ್ಪಶೆಟ್ಟರ ನೇತೃತ್ವದಲ್ಲಿ ರಚನೆಗೊಂಡಿದ್ದ ತಂಡ ಕಾರ್ಯಕ್ರಮವನ್ನು ಆಯೋಜಿಸಿರುತ್ತದೆ.

ಆಗಸ್ಟ್ ೧೯ರಂದು ಜಿಲ್ಲಾಧಿಕಾರಿಗಳ ಕಛೇರಿಗೆ ಭೇಟಿ ನೀಡಿದ ಗಾಂಧೀಜಿ ಸಾಹಿತಿ ಹಾಗೂ ಸ್ವಾತಂತ್ರ್ಯಪ್ರೇಮಿಯೂ ಆಗಿದ್ದ ಜಿಲ್ಲಾಧಿಕಾರಿ ಮಾಸ್ತಿವೆಂಕಟೇಶ್ ಅಯ್ಯಂಗಾರ್ ಅವರಿಂದ ಒಂದಷ್ಟು ಮಾಹಿತಿಯನ್ನು ಪಡೆಯುತ್ತಾರೆ. ಆ ನಂತರ ಇಂದಿನ ಜಿಲ್ಲಾಧಿಕಾರಿ ಕಛೇರಿ ಒಳ ಆವರಣದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಗಾಂಧೀಜಿ ಮಾತನಾಡುತ್ತಾರೆ. ಅಂದಿನ ಪುರಸಭಾ ಅಧ್ಯಕ್ಷ ಬಿ. ಕೇಶವಯ್ಯ ನೇತೃತ್ವದಲ್ಲಿ ಪೌರ ಸನ್ಮಾನ ನೀಡಲಾಗುತ್ತದೆ. ಕಾರ್ಯಕ್ರಮದ ಕೊನೆಯಲ್ಲಿ ಸುಮಾರು ೫,೧೦೦ರೂ. ನಿಧಿ ಸಮರ್ಪಿಸಲಾಗುತ್ತದೆ. ಸಭೆಯಲ್ಲಿ ಪಾಲ್ಗೊಂಡ ಹಲವರು ತೊಟ್ಟಿದ್ದ ಆಭರಣಗಳನ್ನೇ ಕಳಚಿ ಅರ್ಪಿಸುತ್ತಾರೆ. ಚಿಕ್ಕಮಗಳೂರಿನ ಇತಿಹಾಸದಲ್ಲಿ ಅದೊಂದು ಚರಿತ್ರಾರ್ಹ ದಿನ.



### ಯಂಗ್ ಇಂಡಿಯಾ ಉಲ್ಲೇಖ

ಚಿಕ್ಕಮಗಳೂರ ಭೇಟಿಯನ್ನು ಗಾಂಧೀಜಿ ನೇತೃತ್ವದ 'ಯಂಗ್ ಇಂಡಿಯಾ' ಪತ್ರಿಕೆ ದಾಖಲಿಸಿದ ವರದಿಯ ಕನ್ನಡ ಅನುವಾದ ಹೀಗಿದೆ :

'ಗಾಂಧೀಜಿ ಅವರು ಚಿಕ್ಕಮಗಳೂರಿಗೆ ಬಂದಾಗ ಸುಪ್ರಸಿದ್ಧ ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಜಿಲ್ಲಾಧಿಕಾರಿಗಳಾಗಿದ್ದರು. ಮಾಸ್ತಿ ಅವರು, ನಾಗಪ್ಪ ಶೆಟ್ಟರೂ, ಅಲ್ಲಿನ ಕಾಫಿ ತೋಟಗಳ ಮಾಲೀಕರೂ ಸೇರಿ ಸ್ವಾಗತ ಸಮಿತಿಯನ್ನು ರಚಿಸಿದ್ದರು. ಅಲ್ಲಿನ ಸಭೆ ದೊಡ್ಡ ಸಭೆಯಾಗಿತ್ತು. ಐದು ಸಾವಿರ ರೂಪಾಯಿ ಸ್ವಾತಂತ್ರ್ಯ ಹೋರಾಟದ ನಿಧಿ ಸಂಗ್ರಹವಾಯಿತು'.

'ಸಭೆಯಲ್ಲಿ ಹೆಂಗಸರಿಗೆ ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಲಾಗಿತ್ತು. ಆ ಸಭೆಗೆ ಆದಿ ಕರ್ನಾಟಕ ಜಾತಿಯ ಹೆಂಗಸರೂ ಬಂದಿದ್ದರು. ಆ ಹೆಂಗಸರು ಉಚ್ಚ ಜಾತಿಯವರು ಕೂತಿದ್ದ ಸ್ಥಳಕ್ಕಿಂತ ದೂರದ ಸ್ಥಳದಲ್ಲಿ ಕುಳಿತಿದ್ದರು. ಅದನ್ನು ನೋಡಿದ ಗಾಂಧೀಜಿ ಅವರು ಈ ಅಸ್ಪೃಶ್ಯ ಹೆಂಗಸರ ಸಂಪರ್ಕದಿಂದ ನೀವು ಮೈಲಿಗೆಯಾಗುತ್ತೀರಾ? ಎಂದು ಸವರ್ಣೀಯ ಮಹಿಳೆಯರನ್ನು ಕೇಳಿದರು. ಸವರ್ಣೀಯ ಮಹಿಳೆಯರು ಯಾರೂ ತಾವು ಹಾಗೇ ಮೈಲಿಗೆಯಾಗುತ್ತೇವೆ ಎಂದು ಹೇಳಲಿಲ್ಲ. ಆಗ ಆದಿ ಕರ್ನಾಟಕ ಹೆಂಗಸರು ಎದ್ದು ಬಂದು ಅವರ ನಡುವೆ ಕುಳಿತುಕೊಂಡಾಗ ಸವರ್ಣೀಯ ಮಹಿಳೆಯರಲ್ಲಿ ಯಾವ ಗಲಿಬಿಲಿ ಆಗಲಿಲ್ಲ'.

### ಪ್ರಭಾವಿ ಅನುವಾದ

ಗಾಂಧೀಜಿಯವರ ಹಿಂದಿಯ ಭಾಷಣವನ್ನು ಕರ್ನಾಟಕ ಕೇಸರಿ ಗಂಗಾಧರರಾವ್ ದೇಶಪಾಂಡೆ ಕನ್ನಡೀಕರಿಸುತ್ತಾರೆ. ಖಾದಿ ಧಾರಣೆ, ವಿದೇಶಿ

ವಸ್ತುಗಳನ್ನು ತ್ಯಜಿಸುವುದು, ಹರಿಜನರಿಗೆ ಸಮಾನತೆ ಮತ್ತಿತರ ವಿಚಾರಗಳನ್ನು ಪ್ರಸ್ತಾಪಿಸಿದ ಗಾಂಧೀಜಿ, ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳನ್ನು ದೇಶದಿಂದ ಹೊರಗೆ ಕಳುಹಿಸಿ ಸ್ವರಾಜ್ಯ ಸ್ಥಾಪನೆಗಾಗಿ ಕೈಜೋಡಿಸಲು ಮನವಿ ಮಾಡುತ್ತಾರೆ. ಸುಂದರ ಭಾಷೆಯ ಅನುವಾದ ಕೇಳುಗರನ್ನು ಸೆಳೆಯುತ್ತದೆ.

ಗಾಂಧೀಜಿ ಜೊತೆ ಮೀರಾಬೆನ್, ರಾಜಗೋಪಾಲಾಚಾರಿ, ಮಹಾದೇವ ದೇಸಾಯಿ, ಗೋವಿಂದವಲ್ಲಭ ಪಂಥ್, ಆಚಾರ್ಯ ಕೃಪಲಾನಿ, ಸರ್ದಾರ್ ವೆಂಕಟರಾಮಯ್ಯ, ನಮ್ಮವರೇ ಹೊಸಕೊಪ್ಪ ಕೃಷ್ಣರಾವ್ ಇದ್ದರು.

ಗಾಂಧೀಜಿ ದರ್ಶನ ಮತ್ತು ಭಾಷಣದಿಂದ ಪ್ರಭಾವಿತರಾದ ಸ್ಥಳೀಯ ಉತ್ಸಾಹಿ ಯುವಕರಾದ ಬಿ. ಕೆ. ನರಸಿಂಹಮೂರ್ತಿ, ಸೀತಾರಾಮಯ್ಯ, ಎಸ್. ಅಣ್ಣಪ್ಪಶೆಟ್ಟಿ, ಶಿವಾನಂದ, ನಾರಾಯಣ ನಾಯಕ, ಆಲ್ದೂರು ಬಸಪ್ಪಶೆಟ್ಟಿ, ಸಿ. ವಿ. ಧ್ರುವರಾವ್, ಮಾಕೋನಹಳ್ಳಿ ದೊಡ್ಡಪ್ಪಗೌಡ, ರಾಮಸ್ವಾಮಿ, ವಾಸುದೇವ ಮೂರ್ತಿ, ವೈ. ಎಂ. ಚಂದ್ರಶೇಖರಯ್ಯ ಮತ್ತಿತರರು ಸೇವಾದಳ ಮತ್ತು ಹೋರಾಟ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆಂದು ಸ್ವಾತಂತ್ರ್ಯ ಯೋಧರ ಸಂಘದ ಮುಖಂಡರಾಗಿದ್ದ ಸಂಜೀವಪ್ಪ ನಾಯ್ಡು ದಾಖಲಿಸುತ್ತಾರೆ.

ಗಾಂಧೀಜಿ ಅವರ ಮಾತುಗಳಿಂದ ಹಲವರು ಪ್ರೇರಣೆಗೊಳ್ಳುತ್ತಾರೆ. ಸ್ವಾತಂತ್ರ್ಯದ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ. ಒಟ್ಟಾರೆ ಅಸ್ಪೃಶ್ಯರು ಸಾರ್ವಜನಿಕವಾಗಿ ಎಲ್ಲರೊಂದಿಗೂ ಕುಳಿತುಕೊಳ್ಳುವ ಕಾಲ ಬರಲು ಗಾಂಧೀಜಿ ಇಲ್ಲಿಗೆ ಬರುವತನಕ ಕಾಯಬೇಕಾಯಿತ್ತೇನೋ.

## ಶಿವಪುರ ಧ್ವಜ ಸತ್ಯಾಗ್ರಹದಲ್ಲಿ

೧೯೩೮ರ ನವೆಂಬರ್ ೪ರಂದು ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಚಿಕ್ಕಮಗಳೂರಿನ ಅಣ್ಣಪ್ಪಶೆಟ್ಟಿ, ಆಲ್ದೂರು ಬಸಪ್ಪಶೆಟ್ಟಿ, ನರಸಿಂಹರಾಜಪುರದ ಕೋದಂಡ ಭಟ್ಟರು, ಮಾಕೋನಹಳ್ಳಿ ಹುಚ್ಚೇಗೌಡರು, ಭಾಗಮನೆ ದೇವೇಗೌಡರು, ಡಿ. ಎಸ್. ಕೃಷ್ಣೇಗೌಡ, ಎ. ಆರ್. ನಾರಾಯಣ ನಾಯಕ್, ತರೀಕೆರೆಯ ಹಂಜಿಶಿವಣ್ಣ, ಅಜ್ಜಂಪುರದ ಸುಬ್ರಮಣ್ಯಶೆಟ್ಟಿ ಮತ್ತು ಸತ್ಯನಾರಾಯಣ ಶೆಟ್ಟಿ, ಯಳ್ಳಂಬಳಸೆಯ ವೈ. ಎಂ. ಚಂದ್ರಶೇಖರಯ್ಯ ಮತ್ತಿತರರು ಪಾಲ್ಗೊಂಡಿದ್ದರೆಂದು ತಮ್ಮ ಕೃತಿಯಲ್ಲಿ ಸತ್ಯವಿಠಲ ದಾಖಲಿಸುತ್ತಾರೆ.



## ಅಗ್ರ ಹೋರಾಟಗಾರ ಕೃಷ್ಣರಾವ್

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಬಿತ್ತಿ ಬೆಳೆದ ಅಗ್ರಗಣ್ಯರಲ್ಲಿ ಹೊಸಕೊಪ್ಪ ಕೃಷ್ಣರಾಯರದ್ದು ಮೊದಲ ಹೆಸರು. ಕೊಪ್ಪ ತಾಲ್ಲೂಕಿನ ಹೊಸಕೊಪ್ಪದ ಸಿರಿವಂತ ಬ್ರಾಹ್ಮಣ ರೈತ ಕುಟುಂಬದಲ್ಲಿ ೧೮೯೦ರಲ್ಲಿ ಹುಟ್ಟಿದವರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿದ್ದ ಅವರು, ಚಿಕ್ಕಮಗಳೂರಿನಲ್ಲಿ ಕೆಲಕಾಲ ವಾಸವಾಗಿದ್ದರು. ೧೯೩೨ರಲ್ಲಿ ರಚನೆಗೊಂಡ ಜಿಲ್ಲಾ ಬೋರ್ಡ್ ಪ್ರಥಮ ಅಧ್ಯಕ್ಷರು.

## ಪ್ರಜಾ ಪ್ರತಿನಿಧಿಸಭಾಕ್ಕೆ ನೇಮಕ

ಹೆಚ್ಚು ಶಾಲಾ ಶಿಕ್ಷಣ ಪಡೆಯದಿದ್ದರೂ ಸುತ್ತಲಿನ ಆಗು–ಹೋಗುಗಳ ಬಗ್ಗೆ ತೆರೆದ ಕಣ್ಣಿನಿಂದ ನೋಡುವ ಸ್ವಭಾವದವರು. ಆಡಳಿತಗಾರರಿಂದ ರೈತರಿಗೆ ಉಂಟಾಗುತ್ತಿದ್ದ ತೊಂದರೆಯನ್ನು ಮನಗಂಡು ಮಲೆನಾಡು ಭೂ ಮಾಲೀಕರ ಸಂಘವನ್ನು ಪ್ರಾರಂಭಿಸಿದವರು. ಇದರ ಪರಿಣಾಮ ೧೯೧೨ರಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭಾಕ್ಕೆ ನೇಮಕವಾಗುತ್ತಾರೆ. ಕೇವಲ ೨೨ ವರ್ಷದ ಯುವಕನ ಆಲೋಚನೆಗಳು ಟಾಕು ಟೀಕಾದ ವೇಷಭೂಷಣ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರ ಗಮನ ಸೆಳೆಯಿತು. ಇಂಗ್ಲಿಷ್, ಹಿಂದಿ ಚೆನ್ನಾಗಿ ಕಲಿಯುವುದು ಸೇರಿದಂತೆ ಸುಧಾರಣಾ ವಿಚಾರಗಳ ಬಗ್ಗೆ ತಳಸ್ಪರ್ಶಿ ಅಧ್ಯಯನದ ಅನಿವಾರ್ಯತೆಯನ್ನು ಸರ್. ಎಂ. ವಿ. ಮನವರಿಕೆ ಮಾಡಿಕೊಡುತ್ತಾರೆ.

೧೯೨೦ರಲ್ಲಿ ಗಾಂಧೀಜಿಯವರ ತತ್ವ ಪ್ರಣಾಳಿಕೆಗೆ ಮನಸೋತು ಖಾದಿಧಾರಿಯಾಗಿ ರಾಷ್ಟ್ರೀಯ ಚಳುವಳಿಗೆ ಧುಮುಕಿದ ಕೃಷ್ಣರಾವ್, ರಾಜ್ಯದಲ್ಲಿ ಅತ್ಯಂತ ಪ್ರಭಾವಿ ಕಾಂಗ್ರೆಸ್ಸಿಗ ಎನಿಸಿಕೊಳ್ಳುತ್ತಾರೆ. ಅವರ ಜೀವನ ಶೈಲಿ ತೀವ್ರ ಬದಲಾವಣೆಗೊಳ್ಳುತ್ತದೆ. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದು ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

## ಲೆಜಿಸ್ಲೇಟಿವ್ ಕೌನ್ಸಿಲ್‌ಗೂ ನೇಮಕ

ಜೀವನ ಪರ್ಯಂತ ಪ್ರಜಾಪ್ರಭುತ್ವ, ಆಡಳಿತದಲ್ಲಿ ಸುಧಾರಣೆ ಹಾಗೂ ಜವಾಬ್ದಾರಿ ಸರ್ಕಾರ ರಚನೆಗಾಗಿ ಶ್ರಮಿಸಿ ಜನಜಾಗೃತಿ ಹಾಗೂ ಸ್ವರಾಜ್ಯ ಕಲ್ಪನೆ ಬೆಳೆಸಲು ಪ್ರಯತ್ನಿಸಿದ್ದು ಮಹತ್ವದ ಸಂಗತಿ. ಆಗಿನ ಕಾಲದಲ್ಲಿ

ಪ್ರಜಾಪ್ರತಿನಿಧಿ ಸಭೆ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ ಎರಡಕ್ಕೂ ಕೃಷ್ಣರಾವ್ ಏಕಕಾಲದಲ್ಲಿ ಸದಸ್ಯರಾಗಿದ್ದು ಅಪರೂಪದ ಪ್ರಕರಣ. ಪ್ರಜಾ ಪ್ರತಿನಿಧಿತ್ವ ನಾಮಕಾವಸ್ಥೆಯದೆಂದು ಕೃಷ್ಣರಾವ್ ಧ್ವನಿ ಮೊಳಗಿಸಿದ್ದು ಮಹತ್ವ ಎನಿಸುತ್ತದೆ.

೧೯೧೭ರಲ್ಲಿ ಮೈಸೂರಲ್ಲಿ ಸ್ಥಾಪನೆಯಾಗಿದ್ದ ಪ್ರಜಾಮಿತ್ರ ಮಂಡಳಿ ಸ್ವಾತಂತ್ರ್ಯ ವಿರೋಧಿ ನಿಲುವು ತಾಳಿದ್ದು ರಾಜಾಶ್ರಯ ಹೊಂದಿತ್ತು. ಜವಾಬ್ದಾರಿ ಸರ್ಕಾರದ ಬೇಡಿಕೆ ವಿರೋಧಿಯಾಗಿತ್ತು. ಇದರ ವಿರುದ್ಧ ಕೃಷ್ಣರಾವ್ ಪ್ರೋಗ್ರೆಸಿವ್ ಪಾರ್ಟಿ ಕಟ್ಟುತ್ತಾರೆ. ೧೯೨೩ರಲ್ಲಿ ಮಹಾರಾಜ ಕೃಷ್ಣರಾಜ ಒಡೆಯರ್ ಅನೇಕ ಆಡಳಿತ ಸುಧಾರಣೆಗಳನ್ನು ಜಾರಿಗೆ ತರುತ್ತಾರೆ. ಈ ಸುಧಾರಣೆಗಳಲ್ಲಿ ಬ್ರಿಟಿಷರ ಪ್ರಭಾವ ಅಧಿಕವಾಗಿತ್ತು. ೧೯೨೪ರ ಜನವರಿ ೨೦ ಮತ್ತು ೨೧ರಂದು ಹರಿಹರಪುರದಲ್ಲಿ ಬೃಹತ್ ಸಮ್ಮೇಳನವನ್ನೆ ಸಂಘಟಿಸಿ ಸ್ವಾತಂತ್ರ್ಯ ವಿಚಾರಧಾರೆಯನ್ನು ಗ್ರಾಮ ಮಟ್ಟಕ್ಕೆ ತಲುಪಬೇಕೆಂದು ಪ್ರಯತ್ನಿಸುತ್ತಾರೆ. ಇದೇ ಸಂದರ್ಭದಲ್ಲಿ ಮೈಸೂರು ರಾಷ್ಟ್ರ ಮಹಾಸಭೆ ರಚನೆಯಾಗುತ್ತದೆ. ಮುಂದೆ ನ್ಯಾಷನಲ್ ಪಾರ್ಟಿ ಆಫ್ ದಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಪಕ್ಷ ಆರಂಭವಾಗಿದ್ದು ಕೃಷ್ಣರಾವ್ ಇದರ ಸ್ಥಾಪಕ ನಾಯಕರಲ್ಲೊಬ್ಬರು.

೧೯೨೪ರ ಫೆಬ್ರುವರಿ ೨೭ರಂದು ಬೆಂಗಳೂರಿನಲ್ಲಿ ಎಂ. ವೆಂಕಟಕೃಷ್ಣಯ್ಯ ಅಧ್ಯಕ್ಷತೆಯಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಮೈಸೂರಿನ ಸ್ಥಾನಮಾನ, ರಾಜರ ಕರ್ತವ್ಯ, ಮಂತ್ರಿ ಮಂಡಲ ಹಾಗೂ ಜನ ಪ್ರತಿನಿಧಿಗಳ ಹಕ್ಕು ಬಾಧ್ಯತೆ, ನ್ಯಾಯಾಧೀಶರ ನೇಮಕಾತಿ ಮತ್ತಿತರ ವಿಚಾರಗಳ ಬಗ್ಗೆ ತಜ್ಞ ಅಭಿಪ್ರಾಯ ಮಂಡಿಸುವ ಕೃಷ್ಣರಾವ್, ಜನತೆಗೆ ಮೂಲಭೂತ ಹಕ್ಕುಗಳನ್ನು ನೀಡಬೇಕೆಂದು ಪ್ರತಿಪಾದಿಸಿ ಮುಂದೆ 'ಮೈಸೂರು ಸಂವಿಧಾನ' ಎಂಬ ಗ್ರಂಥ ರಚಿಸಿದರು. ದೇಶೀಯ ಸಂಸ್ಥಾನಗಳಿಗೆ ಸಂವಿಧಾನ ರಚನಾ ಸಭೆಯಲ್ಲಿ ಸ್ಥಾನ ಕಲ್ಪಿಸಲು ಶ್ರಮಿಸಿದರು.

## ಬೆಳಗಾವಿ ಅಧಿವೇಶನದ ಉಪಾಧ್ಯಕ್ಷ

ಕರ್ನಾಟಕದಲ್ಲಿ ನಡೆದ ಏಕೈಕ ಕಾಂಗ್ರೆಸ್ ಮಹಾ ಅಧಿವೇಶನ ೧೯೨೪ರಲ್ಲಿ ಬೆಳಗಾವಿಯಲ್ಲಿ ಆಯೋಜನೆಗೊಳ್ಳುತ್ತದೆ. ಅದರ ಸ್ವಾಗತ ಸಮಿತಿ ಉಪಾಧ್ಯಕ್ಷರಾಗಿ ಪ್ರಮುಖ ಪಾತ್ರ ವಹಿಸುವ ಅವಕಾಶ ಚಿಕ್ಕಮಗಳೂರು ಜಿಲ್ಲೆಯ ನೇತಾರ ಕೃಷ್ಣರಾವ್ ಅವರ ಪಾಲಿಗೆ ಲಭ್ಯವಾಗುತ್ತದೆ. ಮಹಾತ್ಮಾಗಾಂಧೀಜಿ ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಡಾ. ಹರ್ಡೇಕರ್ ಮಂಜಪ್ಪ ಅವರೊಂದಿಗೆ



ಹಿಂದೂಸ್ತಾನ್ ಸೇವಾದಳದ ಕರ್ನಾಟಕ ಶಾಖೆಯ ಅಧ್ಯಕ್ಷರಾಗಿ ಸ್ವಯಂ ಸೇವಕರಿಗೆ ತರಬೇತಿ ನೀಡುವಲ್ಲಿ ಪರಿಶ್ರಮಿಸುತ್ತಾರೆ.

೧೯೨೭–೨೮ರಲ್ಲಿ ಸ್ವಾತಂತ್ರ್ಯದ ಬೇಡಿಕೆ ಪ್ರಬಲವಾದಾಗ ಪರಿಸ್ಥಿತಿಯ ಅಧ್ಯಯನ ಮಾಡಿ ವರದಿ ಸಲ್ಲಿಸಲು ಭಾರತಕ್ಕೆ ಬಂದ ಸೈಮನ್ ಕಮೀಷನ್ ಇಡೀ ದೇಶವನ್ನು ಗೌವರ್ನರ್ ಜನರಲ್ ಸರ್ವಾಧಿಕಾರಕ್ಕೆ ಒಳಪಡಿಸಲು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಹೊಸಕೊಪ್ಪ ಕೃಷ್ಣರಾಯರ 'ಸ್ವರಾಜ್ಯ ಸಂವಿಧಾನ' ಗ್ರಂಥ ವಿಶೇಷ ಚರ್ಚೆಗೆ ಒಳಗಾಗುತ್ತದೆ. ಬ್ರಿಟಿಷ್ ಪ್ರಧಾನಿ ಮೆಕ್‌ಡೊನಾಲ್ಡ್ ಪರಾಂಬರಿಸಿ ಅತ್ಯಮೂಲ್ಯ ದಾಖಲೆ ಎಂದು ಪ್ರಶಂಸಿಸುತ್ತಾರೆ. ಮೋತಿಲಾಲ್ ನೆಹರು ರಚಿಸಿದ್ದ ಸಂವಿಧಾನ ಸಮಿತಿ ಸದಸ್ಯರಾಗಿ ರಾಯರು ಕಾರ್ಯ ನಿರ್ವಹಿಸಿದ್ದು ಹೆಮ್ಮೆಯ ಸಂಗತಿ.

## ಸುಭಾಷ್‌ಚಂದ್ರ ಬೋಸ್‌ಗೆ ಬೆಂಬಲ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ರಾಜ್ಯ ಪ್ರತಿನಿಧಿಯಾಗಿದ್ದ ಕೃಷ್ಣರಾವ್ ೧೯೨೮ರ ಕೊಲ್ಕತ್ತಾ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ಚರ್ಚೆಯಲ್ಲಿ ಸುಭಾಷ್‌ಚಂದ್ರ ಬೋಸರನ್ನು ಪ್ರಬಲವಾಗಿ ಬೆಂಬಲಿಸುತ್ತಾರೆ. ಗಾಂಧೀಜಿ ಗುಂಪಿನ ಪ್ರಸ್ತಾವನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು ಕೃಷ್ಣರಾವ್ ಅವರ ಧೀಶಕ್ತಿಗೊಂದು ಉತ್ತಮ ಉದಾಹರಣೆ.

೧೯೨೯ರ ತಿರುವಾಂಕೂರ್ ಸಂಸ್ಥಾನ ಆಯೋಜಿಸಿದ್ದ ದಕ್ಷಿಣ ಭಾರತ ದೇಶೀಯ ಸಂಸ್ಥಾನಗಳ ಸಮ್ಮೇಳನದಲ್ಲಿ ಡಿ.ವಿ.ಜಿ., ತಿ. ತಾ. ಶರ್ಮ, ಸಂಜೀವ್ ರಾವ್, ಸರ್.ಎಂ.ವಿ. ಮತ್ತಿತರರ ಜೊತೆ ಭಾಗವಹಿಸುವ ಕೃಷ್ಣರಾವ್ ಭಾರತ ಏಕೈಕ ಸಂಯುಕ್ತ ರಾಷ್ಟ್ರವಾಗಿರಬೇಕು. ಎಲ್ಲ ಭಾಗಗಳಲ್ಲೂ ಪ್ರಜಾಭಿಪ್ರಾಯಕ್ಕೆ ಒಳಪಟ್ಟ ಸರ್ಕಾರಗಳು ಇರಬೇಕೆಂಬ ಚರ್ಚೆ ಆಗುತ್ತದೆ. ಮುಂದೆ ಇದು 'ಟ್ರಿವೆಂಡ್ರಮ್ ಮೆಮೊರಾಂಡಂ' ಎಂದೇ ದಾಖಲಾಗುತ್ತದೆ.

ಮದ್ರಾಸ್ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿದ್ದ ರಿಲೀಜಿಯಸ್ ಎಂಡೋಮೆಂಟ್ ಬಿಲ್ ನಮ್ಮ ಮಠ–ಮಂದಿರಗಳು ಸರ್ಕಾರಿ ಸ್ವಾಮ್ಯಕ್ಕೆ ಒಳಗಾಗುವ ಆತಂಕ ಸೃಷ್ಟಿಸಿತು. ಉಡುಪಿಯ ಅಷ್ಟಮಠದ ಯತಿಗಳೋರ್ವರು ರಾಯರ ಗಮನಕ್ಕೆ ತರುತ್ತಾರೆ. ೧೯೨೩ರ ಮಾರ್ಚ್ ೩೧ರಂದು ಧಾರ್ಮಿಕ ಸಂಸ್ಥೆಗಳ ಸಮ್ಮೇಳನ ಸಂಘಟಿಸಿ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಕಾಯ್ದೆ

ವಿರೋಧಿಸುತ್ತಾರೆ. ಜನಾಭಿಪ್ರಾಯವನ್ನು ಸಿವ್ಲಾದಲ್ಲಿ ವೈಸರಾಯ್‌ಗೆ ಸಮರ್ಥವಾಗಿ ಮನವರಿಕೆ ಮಾಡಿದ ಪರಿಣಾಮ ಬ್ರಿಟಿಷ್ ಸರ್ಕಾರ ಹಿಂದೆ ಸರಿಯುತ್ತದೆ. ಹಿಂದೂ ಧಾರ್ಮಿಕ ಸಂಸ್ಥೆಗಳ ಸ್ವಾಯುತ್ತತೆಗೆ ವಿಜಯ ತಂದು ಕೊಡುತ್ತಾರೆ.

## ಖಾದಿ ಪ್ರದರ್ಶನ

ಮಹಾತ್ಮಾಗಾಂಧೀಜಿ ಕರ್ನಾಟಕ ಪ್ರವಾಸದ ಸಂದರ್ಭದಲ್ಲಿ ಮೈಸೂರು ಮಹಾರಾಜರೊಂದಿಗೆ ಮಾತುಕತೆ ನಡೆಸಿ ಸ್ವಾವಲಂಬನೆಗೆ ಪ್ರೇರಕವಾದ ಚರಕ ಪ್ರಚುರ ಪಡಿಸಲು ಮಾತುಕತೆ ನಡೆಸಿರುತ್ತಾರೆ. ರಾಜ್ಯದಲ್ಲೆ ಎರಡು ಕಡೆ ಖಾದಿ ಕೇಂದ್ರ ಸ್ಥಾಪಿಸುವ ತೀರ್ಮಾನವಾಗಿ ಬದನವಾಳ ಜೊತೆಗೆ ಅಜ್ಜಂಪುರದಲ್ಲಿ ಆರಂಭಗೊಳ್ಳುತ್ತವೆ. ಖ್ಯಾತ ವಿಜ್ಞಾನಿ ಪ್ರೊ. ಪ್ರಘುಲಚಂದ್ ರಾಯ್‌ರಿಂದ ಅಜ್ಜಂಪುರ ಖಾದಿ ಕೇಂದ್ರ ೧೯೩೧ರ ಸುಮಾರಿನಲ್ಲಿ ಉದ್ಘಾಟಿಸುತ್ತಾರೆ. ಖಾದಿಯ ಜೊತೆಗೆ ಚರ್ಮವನ್ನು ಹದಮಾಡಿ ಪಾದರಕ್ಷೆ ಸೇರಿದಂತೆ ಬೇರೆ ವಸ್ತುಗಳನ್ನು ಗುಣಮಟ್ಟದೊಂದಿಗೆ ತಯಾರಿಸುವ ತರಬೇತಿಯನ್ನು ಸ್ಥಳೀಯ ಚಮ್ಮಾರರಿಗೆ ಈ ವಿಚಾರದಲ್ಲೂ ಪರಿಣಿತರಾಗಿದ್ದ ರಾಯ್ ಆಗ ನೀಡಿದ್ದು ವಿಶೇಷ.

೧೯೩೪ರಲ್ಲಿ ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಗಳ ಬೃಹತ್ ಪ್ರದರ್ಶನವನ್ನು ಚಿಕ್ಕಮಗಳೂರಿನಲ್ಲಿ ಏರ್ಪಡಿಸುತ್ತಾರೆ. ಸ್ವದೇಶಿ ವಸ್ತುಗಳ ತಯಾರಿಕೆ, ಮಾರಾಟ ಬಳಕೆಯ ವ್ಯಾಪಕ ಪ್ರಚಾರವಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ಖಾದಿ ಕೇಂದ್ರವನ್ನು ಸ್ಥಾಪಿಸಿರುತ್ತಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಸಂಘಟನೆಯ ಹೊಣೆ ಹೊತ್ತವರು. ಸ್ವಾವಲಂಬನೆಗೆ ಪ್ರೇರಣೆ ನೀಡಿದವರು. ಸ್ವಾತಂತ್ರ್ಯ ಪೂರ್ವದಲ್ಲೆ ಚಿಕ್ಕಮಗಳೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಾರೆ.

## ರಾಷ್ಟ್ರ ನಾಯಕರ ಸಾಲಿನಲ್ಲಿ

ರಾಜ್ಯದಲ್ಲಿ ಗಾಂಧೀಜಿ ಸೇರಿದಂತೆ ಪ್ರಮುಖ ರಾಷ್ಟ್ರ ನಾಯಕರ ಪ್ರವಾಸಗಳಲ್ಲಿ ಕೃಷ್ಣರಾಯರು ಜೊತೆಗಿರುತ್ತಿದ್ದರು. ಆ ಕಾಲದಲ್ಲಿ ಐತಿಹಾಸಿಕ ಸಂದರ್ಭಗಳನ್ನು ಸೆರೆ ಹಿಡಿದ ಚಿತ್ರಗಳಲ್ಲಿ ಕೃಷ್ಣರಾಯರನ್ನು ಗುರುತಿಸಬಹುದು. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅನಾವರಣಗೊಂಡಿರುವ ಗಾಂಧೀಜಿ ಭೇಟಿ ಚರಿತ್ರಾರ್ಹ ಛಾಯಾಚಿತ್ರದ ಅಡಿ ಟಿಪ್ಪಣಿಯಲ್ಲಿ ಭಾಗವಹಿಸಿದ್ದ ರಾಷ್ಟ್ರೀಯ ನಾಯಕರ ಹೆಸರುಗಳೊಂದಿಗೆ ಕೃಷ್ಣರಾಯರ ಹೆಸರನ್ನು ಇಂದೂ ಕಾಣಬಹುದು.



ರಾಜ್ಯಾದ್ಯಂತ ನಡೆಯುವ ಸಭೆ–ಸಮ್ಮೇಳನ–ಹೋರಾಟಗಳಿಗೆ ಸಹಾಯ, ಸಂಕಷ್ಟದಲ್ಲಿದ್ದ ಹೋರಾಟಗಾರರಿಗೆ ಆರ್ಥಿಕ ನೆರವು, ಮನೆಯೆ ಅನ್ನಛತ್ರ ಮತ್ತಿತರ ಅತಿಯಾದ ಧಾರಾಳತನದಿಂದ ಒಂದೊಂದೇ ಆಸ್ತಿಯನ್ನು ಮಾರುತ್ತಾ ಕೊನೆಗೆ ಹರಕಲು ಬಟ್ಟೆಯಲ್ಲಿ ಸಂಕಷ್ಟದ ದಿನಗಳನ್ನು ಕಾಣುತ್ತಾರೆ. ಆರೋಗ್ಯವೂ ಕೈಕೊಟ್ಟು ಕೇವಲ ೪೯ನೆಯ ವಯಸ್ಸಿನಲ್ಲಿ ಉಡುಪಿಯಲ್ಲಿ ಕೊನೆಯುಸಿರೆಳೆಯುತ್ತಾರೆ. ಸುಮಾರು ೩೦ ವರ್ಷಗಳ ಕಾಲ ಮಿನುಗಿದ ನಕ್ಷತ್ರ ಅಸ್ತಮಿಸುತ್ತದೆ.

## ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ

೧೯೩೨ರಲ್ಲಿ ಗಾಂಧೀಜಿ ಮುಂಬೈ ಪ್ರಾಂತ್ಯದ ದಂಡಿ ಬಂದರಿನಲ್ಲಿ ಉಪ್ಪಿನ ಮೇಲೆ ವಿಧಿಸಿದ ತೆರಿಗೆ ಬಹಿಷ್ಕರಿಸಿ ಚಳುವಳಿ ಪ್ರಾರಂಭಿಸುತ್ತಾರೆ. ಚಿಕ್ಕಮಗಳೂರಿನ ಕೆ. ಆರ್. ನಾರಾಯಣ ಶೆಟ್ಟಿ ಮತ್ತು ರಾಮಚಂದ್ರ ಶೆಟ್ಟಿ ಮುಂಬೈಗೆ ತೆರಳಿದ್ದರು. ಮಂಗಲದಾಸ್ ಮಾರ್ಕೆಟ್ ಜಾಗದಲ್ಲಿ ಉಪ್ಪು ತಯಾರಿಸುತ್ತಿದ್ದಾಗ ಪೋಲೀಸರು ಬಂಧಿಸಿ ಅವರನ್ನು ಯರವಾಡ ಜೈಲಿಗೆ ಹಾಕಲಾಯಿತು.

## ಸ್ವಾತಂತ್ರ್ಯಯೋಧ ಸಿ.ಎಂ.ಎಸ್.ಶಾಸ್ತ್ರಿ

ಅಖಿಲ ಭಾರತ ಸ್ವಾತಂತ್ರ್ಯ ಯೋಧರ ರಾಷ್ಟ್ರೀಯ ಸಂಘಟನೆಯಲ್ಲೂ ಗುರುತಿಸಿಕೊಂಡಿದ್ದ ಸಿ. ಎಂ. ಎಸ್. ಶಾಸ್ತ್ರಿ ಚಿಕ್ಕಮಗಳೂರು ನೆರಳಿನ ಐನಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ೧೯೨೧ರ ಆಗಸ್ಟ್ ೧೭ರಂದು ಜನಿಸುತ್ತಾರೆ. ತಂದೆ ಸಂಸ್ಕೃತ ಪಂಡಿತ ವೇ. ಮೂ. ಮರುಳಾರಾಧ್ಯ ಶಾಸ್ತ್ರಿಗಳವರು ವೃತ್ತಿಯಲ್ಲಿ ಪುರೋಹಿತರು. ಮೆಟ್ರಿಕ್ಯುಲೇಷನ್ ತೇರ್ಗಡೆಯಾದ ನಂತರ ಕುಟುಂಬದ ವಂಶಪಾರಂಪರ್ಯ ವೃತ್ತಿ ಪೌರೋಹಿತ್ಯ ಸಂಸ್ಕೃತ ಕಲಿಕೆಗಾಗಿ ಬೆಂಗಳೂರಿನ ಚಾಮರಾಜ ಪೇಟೆಯ ಸಂಸ್ಕೃತ ವಿದ್ಯಾಪೀಠಕ್ಕೆ ಬಾಲಕನನ್ನು ಸೇರಿಸಲಾಗುತ್ತದೆ. ಸ್ವಾತಂತ್ರ್ಯ ಹೋರಾಟ ಕೈಬೀಸಿ ಕರೆಯುತ್ತದೆ. ಅಧ್ಯಯನಕ್ಕೆ ತಿಲಾಂಜಲಿಯಿತ್ತು ಬೀದಿಗಿಳಿಯುತ್ತಾರೆ. ದೇಶಾದ್ಯಂತ ಹರಡಿದ್ದ ಸ್ವಾತಂತ್ರ್ಯ ಚಳುವಳಿಯ ಕಾವು

ರಾಜಧಾನಿಯನ್ನು ಆವರಿಸಿದ್ದ ಕಾಲ. ತಾರುಣ್ಯದ ಸಹಜ ತುಡಿತ ಮಿಡಿತದ ಯುವ ಮನವನ್ನು ಆಂದೋಲನ ಸೆಳೆಯಿತು.

೧೯೪೨ರ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಹೋರಾಟಕ್ಕೆ ೨೦ರ ಹರೆಯದ ಸಿ. ಎಂ. ಸದಾಶಿವಶಾಸ್ತ್ರಿ ಧುಮುಕುತ್ತಾರೆ. ಬೆಂಗಳೂರಿನ ಹಲವೆಡೆ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾರೆ. ಮೈಸೂರು ಬ್ಯಾಂಕ್ ರಸ್ತೆಯಲ್ಲಿ ಪಿಕೆಟಿಂಗ್ ನಡೆಸಿದ ಸಂದರ್ಭದಲ್ಲಿ ಪೊಲೀಸರ ಲಾಠಿ ರುಚಿಯನ್ನು ಹೆಚ್ಚಾಗಿಯೆ ಪಡೆದಿದ್ದನ್ನು ಹಲವು ಬಾರಿ ತಮ್ಮ ಬಾಳ ಸಂಜೆಯಲ್ಲಿ ನೆನಪಿಸಿಕೊಳ್ಳುತ್ತಿದ್ದರು.

## ಮುಂಬೈ ಚಲೋ ಹೋರಾಟ

ಹಿರಿಯ ಹೋರಾಟಗಾರರ ಸೂಚನೆಯ ಮೇರೆಗೆ ಬೆಂಗಳೂರಿನ ಸ್ನೇಹಿತರ ತಂಡ ಕಟ್ಟಿಕೊಂಡು 'ಮುಂಬೈ ಚಲೋ'ಗಾಗಿ ರೈಲಿನಲ್ಲಿ ಶಾಸ್ತ್ರಿಗಳ ತಂಡ ಹೊರಡುತ್ತದೆ. ಹರಿಹರದ ಬಳಿ ರೈಲನ್ನು ತಡೆದು ತಪಾಸಣೆ ಮಾಡಿದ ಮಿಲಿಟರಿ ಪಡೆ ಈ ತಂಡವನ್ನು ಪತ್ತೆಹಚ್ಚಿ ಹಿಡಿದು–ಹೊಡೆದು ಓಡಿಸುತ್ತದೆ. ಅವಮಾನದಿಂದ ಕುದಿಯುತ್ತಿದ್ದ ಶಾಸ್ತ್ರಿಗಳ ತಂಡ ರೈಲುಹಳಿ ಕಿತ್ತು, ನಿಲ್ದಾಣಕ್ಕೆ ಬೆಂಕಿಹಚ್ಚಿ ಪಲಾಯನ ಮಾಡಿ ಹಾಗೂ ಹೀಗೂ ಒಂದಷ್ಟು ದೂರ ನಡೆದು, ಸಾರಿಗೆ ವಾಹನದವರನ್ನು ಕಾಡಿ ಬೇಡಿ ಅಂತೂ ತಾವೊಬ್ಬರೆ ಚಿಕ್ಕಮಗಳೂರು ತಲುಪುತ್ತಾರೆ.

ಚಿಕ್ಕಮಗಳೂರಿನಲ್ಲಿ ಶಂಕರಪ್ಪ, ಸಂಜೀವಪ್ಪ ನಾಯ್ಡು, ಧ್ರುವ, ಅಣ್ಣಪ್ಪ ಶೆಟ್ಟಿ, ಎ. ಎಸ್. ಚಂದ್ರಶೇಖರ್ ಮತ್ತಿತರರ ತಂಡ ಸೇರಿ ಜನ ಜಾಗೃತಿ ಕಾರ್ಯದ ಜೊತೆಗೆ ಅಸಹಕಾರ ಚಳುವಳಿ ಮುಂದುವರೆಸುತ್ತಾರೆ.

## ರಾಜ ದ್ರೋಹದ ಆರೋಪ : ಸೆರೆ

ಇಲ್ಲಿಂದ ಮಾಗಡಿವರೆಗೆ ನಾಲ್ಕೈದು ಕಿ.ಮೀ. ದೂರವಾಣಿ ತಂತಿಯನ್ನು ತುಂಡರಿಸಿ ಕೆರೆಗೆ ಹಾಕಿದ ಶಾಸ್ತ್ರಿಗಳ ತಂಡ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಾ ಜನರನ್ನು ಪ್ರಚೋದಿಸುತ್ತಿರುತ್ತದೆ. ಕೆರಳಿದ ಪೊಲೀಸರು ಸೆರೆ ಹಿಡಿದು ಚಿಕ್ಕಮಗಳೂರು ಉಪ ಬಂಧಿಖಾನೆಯಲ್ಲಿ ವಿಚಾರಣಾಧೀನ ಕೈದಿಯಾಗಿಸುತ್ತಾರೆ. ಹತ್ತಾರು ಮೊಕದ್ದಮೆಗಳ ಸೇರ್ಪಡೆಯಾಗುತ್ತವೆ. ರಾಜದ್ರೋಹ ಮತ್ತಿತರ ಅಪವಾದ ಹೊರಿಸಿ ಮೂರು ವರ್ಷಗಳ ಕಠಿಣ ಸಜೆ ವಿಧಿಸಿ ತುಮಕೂರು ಜೈಲು ಮತ್ತು ಬೆಂಗಳೂರು ಸೆಂಟ್ರಲ್ ಜೈಲಿಗಳಿಗೆ ರವಾನಿಸುತ್ತಾರೆ. ಅಲ್ಲಿ ಕ್ಷಮಾಪಣೆ ಪತ್ರ ಬರೆದುಕೊಟ್ಟು ಹೋರಾಟದಿಂದ ಹಿಂದೆ ಸರಿದರೆ ಕ್ಷಮೆ ದಯಪಾಲಿಸುವ ಆಮಿಷ ಬ್ರಿಟಿಷ್ ಅಧಿಕಾರಿಗಳು ಒಡ್ಡುತ್ತಾರೆ. ಇದ್ಯಾವುದಕ್ಕೂ ಬಗ್ಗುವುದಿಲ್ಲ. ಸೆಂಟ್ರಲ್ ಜೈಲ್‌ನಲ್ಲಿ ಹಿರಿಯ ಹೋರಾಟಗಾರರ ಪರಿಚಯವಾಗುತ್ತದೆ.



## ಗಲ್ಲಿಗೇರಿದ ಯೋಧರ ವೀಕ್ಷಣೆ

ಈ ನಡುವೆ ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮಸ್ಥರು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ಗ್ರಾಮರಾಜ್ಯ ಘೋಷಿಸಿ ಸ್ವತಂತ್ರ ಆಡಳಿತ ನಡೆಸಿದ ಹಿನ್ನಲೆಯಲ್ಲಿ ಭಾರೀ ದೌರ್ಜನ್ಯಕ್ಕೆ ಒಳಗಾಗಬೇಕಾಯಿತು. ಪ್ರಮುಖ ಈಸೂರು ಹೋರಾಟಗಾರರಾದ ಗುರಪ್ಪ, ಶಂಕರಪ್ಪ, ಹಾಲಪ್ಪ, ಸೂರ್ಯ ನಾರಾಯಣಚಾರಿ ಸೇರಿ ಐವರಿಗೆ ಮರಣದಂಡನೆಯಾಗಿ ಇನ್ನಿತರೆ ೨೮ ಮಂದಿಗೆ ಜೀವಾವಧಿ ಶಿಕ್ಷೆಯಾಗಿರುತ್ತದೆ. ದಿನಕ್ಕೆ ಇಬ್ಬರಂತೆ ಮರಣ ದಂಡನೆಗೊಳಗಾದ ಯೋಧರನ್ನು ವಧಿಸಲಾಗುತ್ತಿತ್ತು. ಅವರೆಲ್ಲ 'ಭಾರತ ಮಾತಾಕೀ ಜೈ' ಹೇಳುತ್ತಾ ಗಲ್ಲಿಗೆ ಕೊರಳೊಡಿದ್ದಕ್ಕೆ ಶಾಸ್ತ್ರಿಗಳು ಸಾಕ್ಷಿ ಆಗಿದ್ದನ್ನು ಜೀವನದ ಮರೆಯಲಾರದ ನೋವಿನ ಘಟನೆ ಎಂದು ಆಗಾಗ ಹೇಳುತ್ತಿದ್ದರು. ಇಲ್ಲಿ ಅವರ ಜೀವನದ ಧ್ಯೇಯ ಹರಳುಗಟ್ಟುತ್ತದೆ.

## ನಾಡ ಕೈಬಾಂಬ್ ಸ್ಫೋಟ

ಊರಿಗೆ ಬಂದ ಮೇಲೆ ಕೈ ಖಾಲಿಯಾಗಿತ್ತು. ತಾಯಿ ಅಡಗಿಟ್ಟಿಸಿದ್ದ ಬೆಳ್ಳಿ ನಾಣ್ಯಗಳನ್ನು ಹುಡುಕಿ ಹೋರಾಟದ ವೆಚ್ಚಕ್ಕೆ ಬಳಸಿಕೊಳ್ಳುತ್ತಾರೆ. ಪ್ರಭಾತ್ ಭೇರಿ, ಪಿಕೆಟಿಂಗ್, ಕಾನೂನುಭಂಗ ಹೋರಾಟಗಳು ಮುಂದುವರೆಯುತ್ತವೆ. ಅಹಿಂಸಾವಾದದ ಗಾಂಧಿ ಮಾರ್ಗದಿಂದ ಮಾತ್ರ ಸ್ವಾತಂತ್ರ್ಯ ಗಳಿಕೆ ಸಾಧ್ಯವೆಂಬ ನಂಬಿಕೆ ಯುವಕರ ತಂಡದಲ್ಲಿ ನಿಧಾನವಾಗಿ ಮಾಸುತ್ತಾ ಬರುತ್ತದೆ. ಕೆಲವು ಉಗ್ರವಾದಿಗಳ ವಿಚಾರ ಅರಿತು ಸಂಪರ್ಕಕ್ಕೂ ಪ್ರಯತ್ನಿಸುತ್ತಾರೆ. ಮಾಹಿತಿಯೊಂದನ್ನು ಆಧರಿಸಿ ಮಿತ್ರರಾದ ಕೆ. ವಿ. ನಂಜುಂಡಯ್ಯ, ರಾಮಚಂದ್ರರಾವ್ ಜೊತೆಗೂಡಿ ಶಿರಸಿ–ಸಿದ್ಧಾಪುರಕ್ಕೆ ತೆರಳಿ ನಾಡ ಕೈಬಾಂಬ್ ತಯಾರಿಕೆ ಕಲಿತು ಬರುತ್ತಾರೆ.

ಒಂದು ರಾತ್ರಿ ಪ್ರಾಯೋಗಿಕವಾಗಿ ಚಿಕ್ಕಮಗಳೂರು ಜೈಲಿಗೆ ಕೈಬಾಂಬ್

ಎಸೆಯುತ್ತಾರೆ. ಜೈಲ್‌ಗೋಡೆಯ ಸಣ್ಣ ಭಾಗವೊಂದು ಬಿರುಕು ಮೂಡಿ ಜಖಂಗೊಳ್ಳುತ್ತದೆ. ಗಾಬರಿಗೊಂಡ ಪೊಲೀಸರು ಮೂಲ ಹುಡುಕಿಕೊಂಡು ಹೊರಟಾಗ ಶಾಸ್ತ್ರಿಗಳ ಬಳಿ ಬಂದು ನಿಲ್ಲುತ್ತಾರೆ. ೧೭ರ ಜೊತೆ ಮತ್ತೊಂದು ಕೇಸ್ ದಾಖಲಾಗುತ್ತದೆ. ಪೊಲೀಸರು ಹುಡುಕಾಡಿದಾಗ ಮುತ್ತಿನಪುರದ ಮಾವನ ತೋಟದ ಮನೆಯಲ್ಲಿ ಅಡಗುತ್ತಾರೆ. ಎರಡು–ಮೂರು ದಿನಗಳಲ್ಲಿ ಬೇಸರ ಬರುತ್ತದೆ. ಧೈರ್ಯಮಾಡಿ ಇಲ್ಲಿಂದ ಮಾರುವೇಷದಲ್ಲಿ ಗಾಂಧಿ ಆಶ್ರಮಕ್ಕೆ ತೆರಳಲು ಬೆಳಗಿನಜಾವ ೪ಗಂಟೆಗೆ ಹೊರಟು ಬರುವಾಗ ಊರವರೇ ಕೊಟ್ಟ ಮಾಹಿತಿ ಅನುಸರಿಸಿ ಪೊಲೀಸರು ಚಿಕ್ಕಮಗಳೂರು ಸಮೀಪ ಸೆರೆ ಹಿಡಿಯುತ್ತಾರೆ. ಮಾಮೂಲಿ ಜೈಲು ಶಿಕ್ಷೆ. ಹೊರಬಂದ ಮೇಲೆ ಪುನಃ ಹೋರಾಟ.

## ಕಳ್ಳುಬಳ್ಳಿಯನ್ನೂ ಹೋರಾಟಕ್ಕೆ

ಕುಟುಂಬದ ಕಾರ್ಯಕ್ಕೆ ನೆಂಟರಿಷ್ಟರು ಮನೆಗೆ ಬಂದಿರುತ್ತಾರೆ. ಹೋರಾಟದ ನೇತೃತ್ವವನ್ನು ವಹಿಸಿದ ಖಾದಿವ್ರತಧಾರಿ ಸಿ. ಎಂ. ಎಸ್. ಶಾಸ್ತ್ರಿಗಳು ಕಳ್ಳುಬಳ್ಳಿಯನ್ನೂ ಹೋರಾಟಕ್ಕೆ ಎಳೆ ತರುತ್ತಾರೆ. ಬಂಧುಗಳಾದ ಎ. ಬಿ. ಬಸವರಾಧ್ಯ, ಚಿಕ್ಕೊಳಲೆ ಸದಾಶಿವಶಾಸ್ತ್ರಿ, ಮುಪ್ಪಿನಯ್ಯ ಶಾಸ್ತ್ರಿ, ಹಿರಣ್ಣಯ್ಯ, ಕದ್ರಿಮಿದ್ರಿ ಶ್ರೀಕಂಠಶಾಸ್ತ್ರಿ, ಕೆ. ವಿ.ಮರುಳಯ್ಯ, ಗೌ. ರು. ಓಂಕಾರಯ್ಯ, ಬಸವಣ್ಣಯ್ಯ ಮತ್ತಿತರರೊಂದಿಗೆ ಧ್ವಜ ಮೆರವಣಿಗೆ ನಡೆಸಿದ್ದು, ಪೊಲೀಸರು ಇವರನ್ನೆಲ್ಲ ಊರ ಹೊರಗೆ ಬಿಟ್ಟು ಬುದ್ಧಿಹೇಳಿ ಕೇಸ್ ದಾಖಲಿಸದೆ ಕೈ ಬಿಡುತ್ತಾರಂತೆ.

ಸ್ವಾತಂತ್ರ್ಯ ನಂತರ ಪಿಎಸ್‌ಪಿ ಮೂಲಕ ರಾಜಕಾರಣದಲ್ಲೂ ತೊಡಗಿ ಶಾಸಕರಾಗುತ್ತಾರೆ. ೧೯೭೮ರಲ್ಲಿ ಮಾಜಿಪ್ರಧಾನಿ ಇಂದಿರಾಗಾಂಧಿ ಸೋತು ಮನೆ ಸೇರಿದಾಗ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಮೂಲಕ ಮರುಹುಟ್ಟು ಪಡೆಯುತ್ತಾರೆ. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಿ.ಎಂ.ಎಸ್.ಶಾಸ್ತ್ರಿಗಳು ಮಹತ್ವದ ಪಾತ್ರವಹಿಸಿದ್ದನ್ನು ಸಾಂದರ್ಭಿಕವಾಗಿ ನೆನಪಿಸಿಕೊಳ್ಳಲು ಬಯಸುತ್ತೇನೆ.

## ಸೌಲಭ್ಯ ತಿರಸ್ಕರಿಸಿದ ಸ್ವಾಭಿಮಾನಿ ಶಿವಾನಂದ

ಸಿ.ಎಂ.ಎಸ್.ಶಾಸ್ತ್ರಿ, ಅಣ್ಣಪ್ಪಶೆಟ್ಟಿ, ಡಿ. ಎಸ್. ಕೃಷ್ಣಮೂರ್ತಿ ಜೊತೆ ಜೊತೆಯಲ್ಲೆ ಹೆಜ್ಜೆ ಹಾಕಿದವರು ಸಿ. ಆರ್. ಶಿವಾನಂದ. ಸಾರಾಯಿ ವಿರೋಧಿ ಚಳುವಳಿಯಲ್ಲಿ ಹೆಚ್ಚು ತೊಡಗಿಸಿಕೊಂಡ ದೇಶಭಕ್ತ. ವಿದೇಶಿ ಬಟ್ಟೆಯನ್ನು ತಿರಸ್ಕರಿಸಿ ಅಪ್ಪಟ ಖಾದಿಜುಬ್ಬ, ಟೋಪಿ, ಧೋತಿ ಕೊನೆಯವರೆಗೂ ಧರಿಸುತ್ತಿದ್ದ ಧೀರ.

೧೯೩೭ರಲ್ಲಿ ಮಹಾತ್ಮಾಗಾಂಧೀಜಿ ಚಿಕ್ಕಮಗಳೂರಿಗೆ ಭೇಟಿ ನೀಡಿದಾಗ ಊರಿನ ಪ್ರಮುಖ ರುದ್ರಪ್ಪ ಶೆಟ್ಟರೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪುತ್ರ ಶಿವಾನಂದಗೆ ಕೇವಲ ಐದು ವರ್ಷ. ಸಂತನನ್ನು ನೋಡಿ ಪುಳಕಿತಗೊಂಡು ಅಲ್ಲಿಂದಲೇ ಪ್ರೇರಣೆಗೊಂಡವರು ಪ್ರಾಥಮಿಕ ಶಿಕ್ಷಣಕ್ಕಾಗಿ ದೋಣಿಖಣದ ಸರ್ಕಾರಿ ಶಾಲೆಯನ್ನು ಸೇರಿದವರು ಅಲ್ಲಿ ನಡೆಯುತ್ತಿದ್ದ ಪ್ರಭಾತ್ ಭೇರಿಯಲ್ಲಿ ಪಾಲ್ಗೊಳ್ಳುತ್ತಿದ್ದ ಪೋರ. ಜಿಲ್ಲೆಯ ಏಕೈಕ ಪ್ರೌಢಶಾಲೆ ಕಲಿಯುವಾಗ ಹೋರಾಟದ ಆಕರ್ಷಣೆ ಹೆಚ್ಚುತ್ತದೆ. ಪರೀಕ್ಷೆ ಬರೆಯದೆ ಚಳುವಳಿಯಲ್ಲಿ ಭಾಗವಹಿಸಿ ಮನೆಯವರ ಕೆಂಗಣ್ಣಿಗೂ ಪಾತ್ರವಾಗುತ್ತಾರೆ.

ಇಂಟರ್ ಮಿಡಿಯಟ್‌ಗಾಗಿ ಶಿವಮೊಗ್ಗ ಸೇರಿದರೂ ಸ್ವಾತಂತ್ರ್ಯದ ಆಕರ್ಷಣೆ ಕಡಿಮೆ ಆಗಲಿಲ್ಲ. ಜೆ. ಎಚ್. ಪಟೇಲ್‌ರೊಂದಿಗೆ ಸಮಾಜವಾದಿಗಳ ನಂಟು ಬೆಳೆಯುತ್ತದೆ. ಮೈಸೂರಿನಲ್ಲಿ ಪದವಿಗಾಗಿ ಕಲಿಯುತ್ತಿದ್ದಾಗಲೂ ನಂಟು ಬಲಗೊಳ್ಳುತ್ತದೆ. ಓದಿಗಿಂತ ಹೋರಾಟವೇ ಹೆಚ್ಚಾಗಿ ಮನೆಯವರು ವಾಪಸ್ಸು ಕರೆಸಿಕೊಳ್ಳುತ್ತಾರೆ. ಇಲ್ಲೂ ಕ್ವಿಟ್ ಇಂಡಿಯಾ ಚಳುವಳಿ ಕೈ ಬೀಸಿ ಕರೆಯುತ್ತದೆ. ಕಾರಾಗೃಹದ ಕತ್ತಲು ಕೋಣೆಯ ವಾಸವೂ ಆಗುತ್ತದೆ. ವಿಚಲಿತರಾಗದ ಯುವಕ ಜೈಲೊಳಗೂ ಸತ್ಯಾಗ್ರಹ ನಡೆಸಿ ಕೇಂದ್ರ ಬಿಂದುವಾಗುತ್ತಾನೆ.

ಸ್ವಾತಂತ್ರ್ಯ ಬಂದ ನಂತರವೂ ಮೈಸೂರು ಸಂಸ್ಥಾನ ಭಾರತ ಗಣರಾಜ್ಯದೊಂದಿಗೆ ಸೇರ್ಪಡೆ ಆಗಬೇಕೆಂಬ ಹೋರಾಟದಲ್ಲಿ ಶಿವಾನಂದ ಮುಂಚೂಣಿಯಲ್ಲಿರುತ್ತಾರೆ. ಪುನಃ ಜೈಲುವಾಸ. ಜಗ್ಗದ ಕುಗ್ಗದ ಯೋಧ ಗಾಂಧಿ ಟೋಪಿಗೆ ತಲೆಯೊಡ್ಡಿದವರು ಜೀವನಪೂರ್ತಿ ಖಾದಿಧಾರಿ. ಎಸ್. ನಿಜಲಿಂಗಪ್ಪ, ಬಿ. ಡಿ. ಜತ್ತಿ, ವೀರೇಂದ್ರ ಪಾಟೀಲ್, ಎಂ. ಎಸ್. ಗುರುಪಾದಸ್ವಾಮಿ, ಎಸ್. ಮಲ್ಲಿಕಾರ್ಜುನಯ್ಯ, ಪಾಟೀಲ ಪುಟ್ಟಪ್ಪ ಅವರುಗಳೊಂದಿಗೆ ಸಂಪರ್ಕ ಹೊಂದಿ ಪ್ರೇರಣೆ ಪಡೆದವರು.

## ದೇಶಕ್ಕೆ ನಾನೇನು ಕೊಟ್ಟೆ

'ದೇಶ ನನಗೇನು ಕೊಟ್ಟಿತು ಎಂದು ಯೋಚಿಸದೆ ದೇಶಕ್ಕೆ ನಾನೇನು

ಕೊಟ್ಟೆ' ಎಂಬುದನ್ನು ಆಲೋಚಿಸಬೇಕೆಂಬ ವಿಚಾರಧಾರೆಯ ಶಿವಾನಂದ, ನಾಲ್ಕಾರು ವರ್ಷ ಸ್ವಾತಂತ್ರ್ಯ ಹೋರಾಟ–ಮೈಸೂರು ಚಲೋದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಜೈಲುವಾಸ ಅನುಭವಿಸಿದವರು. ಸ್ವಾತಂತ್ರ್ಯ ಪಡೆದ ಮೇಲೆ ದೇಶೀಯ ಸರ್ಕಾರ ಸ್ವಾತಂತ್ರ್ಯ ಯೋಧರಿಗೆ ಕೊಡ ಮಾಡಿದ ತಾಮ್ರಪತ್ರ, ಪಿಂಚಣಿ, ಸರ್ಟಿಫಿಕೇಟ್ ಸೇರಿದಂತೆ ಎಲ್ಲ ಸೌಲಭ್ಯಗಳನ್ನೂ ತಿರಸ್ಕರಿಸಿದ ಸ್ವಾಭಿಮಾನಿ.

'ನಾನು ಹೋರಾಡಿದ್ದು ಭಾರತ ಮಾತೆಯನ್ನು ವಿದೇಶಿಯರಿಂದ ಮುಕ್ತಗೊಳಿಸಬೇಕೆಂಬ ಆಲೋಚನೆಯಿಂದ ಮಾತ್ರ. ಅದು ನನ್ನ ಕರ್ತವ್ಯವೂ ಹೌದು. ಕರ್ತವ್ಯ ನಿರ್ವಹಣೆಯಲ್ಲಿ ಪ್ರತಿಫಲಾಪೇಕ್ಷೆ ಲವಲೇಶವೂ ಇರಲಿಲ್ಲ. ಈಗ ಅದರ ಲಾಭ ಪಡೆದರೆ ಆತ್ಮವಂಚನೆ ಆಗುತ್ತದೆ' ಎಂದ ಅಪರೂಪದ ಆದರ್ಶ ನಮ್ಮ ಕಾಲಘಟ್ಟದಲ್ಲಿ ಕಣ್ಣೆದುರು ಇದ್ದದ್ದು ಪುಣ್ಯ ಪ್ರಾಪ್ತಿ.

## ಹೋರಾಟಗಾರರ ಹಿಂಡು

ವಿದ್ಯಾರ್ಥಿ ದಿಸೆಯಲ್ಲೇ ಸ್ವಾತಂತ್ರ್ಯ ಚಳುವಳಿಗೆ ಸ್ಪಂದಿಸಿದ ಶಂಕರಪ್ಪ, ಸುಬ್ರಾಯ ಗಣೇಶಯಾಜಿ, ಪಟ್ಟಾಭಿರಾಮ ಶೆಟ್ಟಿ, ಬಾದನಾರಾಯಣ, ಸಿ. ವಿ. ಧ್ರುವರಾವ್, ಎಂ. ವಿ. ಸುಬ್ಬಯ್ಯ, ಡಾ. ಟಿ. ಆರ್. ಗೊರೂರ್, ಭಾಗಮನೆ ದೇವೇಗೌಡ, ಆಲ್ದೂರಿನ ಬಸಪ್ಪಶೆಟ್ಟಿ, ಎಸ್. ರಾಮಚಂದ್ರರಾವ್, ಸಿ. ಎ. ಹುಚ್ಚಣ್ಣ, ನಾರಾಯಣ ನಾಯಕ, ಡಾ. ಕೆ. ಟಿ. ರಾಮರಾಜೇ ಅರಸ್, ಎಚ್. ಜಿ. ಗೋವಿಂದಗೌಡ, ಎಂ. ಎಲ್. ವಾಸುದೇವ ಮೂರ್ತಿ, ಸಂಜೀವಪ್ಪನಾಯ್ಡು, ಡಿ. ಎಸ್. ಕೃಷ್ಣಮೂರ್ತಿ, ಎಸ್. ಕೃಷ್ಣಶೆಟ್ಟಿ, ಮಲ್ಲಾರಿರಾವ್, ಎ. ಬಿ. ಬಸವರಾಧ್ಯ, ಮರುಳಯ್ಯ, ಮಲ್ಲೇಶಾಚಾರ್, ಯು. ಸಿ. ಮರುಳಸಿದ್ದಪ್ಪ ಶೆಟ್ಟಿ ಮತ್ತಿತರರು ಚಿಕ್ಕಮಗಳೂರಿನಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನೇತೃತ್ವ ವಹಿಸಿ ಸೆರೆವಾಸ ಅನುಭವಿಸಿದ ಪ್ರಮುಖರು.

## ಸೌಲಭ್ಯಕ್ಕೆ ಕೈಚಾಚದ ಪುಟ್ಟಸ್ವಾಮಿ

ಭೂಗತ ಹೋರಾಟದಲ್ಲೆ ಹೆಚ್ಚಾಗಿ ತೊಡಗಿದ್ದ ಜಿ. ಪುಟ್ಟಸ್ವಾಮಿ ಮೂಲತಃ ಹಿಂಜರಿಕೆ ಸ್ವಭಾವದವರು. ಬಾಲ್ಯದಲ್ಲೆ ಮಹಾತ್ಮಾ ಗಾಂಧೀಜಿ ಅವರ ಕರೆಗೆ ಓಗೊಟ್ಟವರು. ಸಮಾಜದ ಅವಗಣನೆಗೆ ತುತ್ತಾದ ಸಮಾಜದಲ್ಲಿ ಹುಟ್ಟಿದ ಅವರು ಗಾಂಧೀಜಿ ಅವರ ಕಟ್ಟಾ ಅನುಯಾಯಿ. ತಮ್ಮದೇ ರೀತಿಯಲ್ಲಿ ಹೋರಾಟಗಾರರನ್ನು ಬೆಂಬಲಿಸುತ್ತಾ ಭಾರತ ಸ್ವಾತಂತ್ರ್ಯಕ್ಕೆ ತಮ್ಮದೇ ಕೊಡುಗೆ ನೀಡಿದ ಮುಖಂಡ. ಕಾಂಗ್ರೆಸ್ಸಿನ ಸಾಮಾಜಿಕ ಸುಧಾರಣೆ ಕಾರ್ಯದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ಶೋಷಿತ ವರ್ಗದ ಪರವಾಗಿ ದೊಡ್ಡ ಧ್ವನಿ ಮೊಳಗಿಸಿದವರು.



ಸ್ವಾತಂತ್ರ್ಯ ಪೂರ್ವದಲ್ಲೆ ಜನಪ್ರತಿನಿಧಿಯಾಗಿ ಆಯ್ಕೆಗೊಂಡ ಪುಟ್ಟಸ್ವಾಮಿ, ಸ್ನೇಹಿತರ ಒತ್ತಾಸೆಯಿಂದ ರಾಜಕಾರಣದಲ್ಲಿ ತೊಡಗಿ ಮುಂದೆ ವಿಧಾನಸಭೆಯ ಉಪಸಭಾಪತಿಯಾಗಿಯೂ ಗಮನ ಸೆಳೆಯುತ್ತಾರೆ. ಎಲ್ಲೂ ತಮ್ಮ ಹೋರಾಟದ ಬಗ್ಗೆ ಹೇಳಿಕೊಳ್ಳದಿದ್ದರೂ ಅವರ ಸಮಕಾಲೀನರಾಗಿದ್ದ ಅಣ್ಣಪ್ಪಶೆಟ್ಟಿ ಮತ್ತು ಧ್ರುವ ಅನೇಕ ಸಂದರ್ಭಗಳಲ್ಲಿ ಪುಟ್ಟಸ್ವಾಮಿ ಅವರ ಹೋರಾಟವನ್ನು ಸ್ಮರಿಸಿದ್ದಾರೆ. ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡಿದ್ದರೂ ಮುಂದೆ ಇದನ್ನು ಮುಂದಿಟ್ಟುಕೊಂಡು ಯಾವುದೇ ಸರ್ಕಾರಿ ಸೌಲಭ್ಯಕ್ಕೂ ಕೈಯೊಡ್ಡಲಿಲ್ಲ.

## ಸಮಾಜವಾದಿ ಚಿಂತಕ ಈಶ್ವರಿ

ಕ್ರಾಂತಿವೀರ ಭಗತ್‌ಸಿಂಗ್‌ರಿಂದ ಪ್ರೇರಣೆ ಪಡೆದು ಅವರಂತೆ ಟೋಪಿ ವೇಷಭೂಷಣ ಧರಿಸುತ್ತಿದ್ದ ಟಿ. ಎನ್. ವಿಶ್ವನಾಥರಾವ್ (ಈಶ್ವರಿ) ಬಟ್ಟೆ ವ್ಯಾಪಾರ ಹೊಲಿಗೆ ನಡೆಸಿ ಜೀವನ ಸಾಗಿಸುತ್ತಿದ್ದ ಕುಟುಂಬದಿಂದ ಬಂದ ಶ್ರಮಜೀವಿ. ವಿದೇಶಿ ವಸ್ತು–ವಸ್ತ್ರ ಬಹಿಷ್ಕರಿಸಬೇಕೆಂಬ ಕಾಂಗ್ರೆಸ್ ಹೋರಾಟದಿಂದ ಪ್ರೇರಣೆ ಪಡೆದವರು. ದಾಸ್ಯದ ವಿದೇಶಿ ಬಟ್ಟೆ ಸುಟ್ಟು ಖಾದಿ ಪ್ರಚುರಪಡಿಸುತ್ತಾರೆ. ಬಟ್ಟೆ ಹೊಲಿಯುವ ವೃತ್ತಿಗೆ ತೊಂದರೆಯಾದರೂ ಲೆಕ್ಕಿಸದ ಆದರ್ಶವಂತ. ಸ್ವಲ್ಪಮಟ್ಟಿನ ಸಮಾಜವಾದಿ ಚಿಂತನೆಗಳು ಯುವಕನನ್ನು ಆಕರ್ಷಿಸುತ್ತದೆ.

ಪಿಕೆಂಟಿಂಗ್‌ಗಳಲ್ಲಿ ಭಾಗವಹಿಸಿದ್ದ ಫಲವಾಗಿ ಜೈಲು ಸೇರಿದರೂ ಧೃತಿಗೆಡದ ಸಾಹಸಿ. ಸೆರೆಮನೆಯ ಬುರುಜಿನ ಮೇಲೆ ತ್ರಿವರ್ಣ ಧ್ವಜ ಹಾರಿಸಲು ಪ್ರಯತ್ನಿಸಿದವರು. ಬುರ್ಖಾ ಧರಿಸಿ ಚಿತ್ರದುರ್ಗ, ಹರಿಹರ ಭಾಗದಲ್ಲೂ ಸಂಚರಿಸಿದವರು. ಶ್ರೀಮಂತರ ಧಾನ್ಯಾಗಾರಗಳ ಲೂಟಿ ಮಾಡಿ ಬಡಬಗ್ಗರಿಗೆ ಆಹಾರ ಧಾನ್ಯಗಳನ್ನು ಹಂಚುತ್ತಿದ್ದ ತಂಡದಲ್ಲಿ ಪ್ರಮುಖ. ಸ್ಫೋಟಕ–ಬಂದೂಕುಗಳ ಬಗ್ಗೆ ಅರಿತಿದ್ದ ವಿಶ್ವನಾಥ್ ಸ್ವಾತಂತ್ರ್ಯಾ ನಂತರ ೧೯೫೧ರಲ್ಲಿ ಚಿಕ್ಕಮಗಳೂರಿನ ವಾಸದ ಮನೆಯಲ್ಲೆ ಸಿಡಿಮದ್ದು ಸ್ಫೋಟಗೊಂಡು ಸಂಸಾರ ಸಹಿತ ಮೃತಗೊಂಡ ದುರ್ದೈವಿ.

## ಭಾಗಮನೆ ದೇವೇಗೌಡ

ಚಿಕ್ಕಮಗಳೂರು ತಾಲ್ಲೂಕು ದಟ್ಟ ಮಲೆನಾಡು ಮಲ್ಲಂದೂರು ಸಮೀಪದ ಭಾಗಮನೆಯ ಅಣ್ಣೇಗೌಡ ಮತ್ತು ಭದ್ರಮ್ಮ ದಂಪತಿಗಳ ತುಂಬು ಕುಟುಂಬದಲ್ಲಿ ಹುಟ್ಟಿದ ದೇವೇಗೌಡ, ಹೆಚ್ಚು ಓದದಿದ್ದರೂ ಕಾಫಿ ಕೃಷಿಯಲ್ಲಿ ತೊಡಗಿಸಿಕೊಂಡವರು. ೧೯೪೬ರ ವೇಳೆಯಲ್ಲಿ ಚಿಕ್ಕಮಗಳೂರಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟ ಇವರನ್ನು ಕೈಬೀಸಿ ಕರೆಯಿತು. ಗಾಂಧೀಜಿ ಅವರಿಂದ ಪ್ರಭಾವಿತರಾಗಿ ಖಾದಿಧಾರಿಗಳು ಆಗಿದ್ದ ಇವರು, ಸೈಕಲ್ ಮೇಲೆಯೇ ಹೆಚ್ಚಾಗಿ ಓಡಾಡುತ್ತಿದ್ದರು. ಎಂಟು ಮಕ್ಕಳು ತುಂಬು ಕುಟುಂಬ ಇವರದ್ದಾದರೂ ದೇಶದ ಕರೆ ಇವರನ್ನು ಸುಮ್ಮನೆ ಕೂರಲು ಬಿಡಲಿಲ್ಲ. ಶಿವಪುರ ಸತ್ಯಾಗ್ರಹದಲ್ಲಿ ಇಲ್ಲಿಯ ತಂಡದೊಂದಿಗೆ ಪಾಲ್ಗೊಂಡಿರುತ್ತಾರೆ. ಮೈಸೂರು ಚಲೋ ಹೋರಾಟದಲ್ಲಿ ಸಂಪೂರ್ಣ ತೊಡಗಿಸಿಕೊಳ್ಳುತ್ತಾರೆ. ಸ್ಥಳೀಯ ಹೋರಾಟಗಾರರಿಗೆ ನೆರವು ನೀಡುವಲ್ಲಿ ಸಿದ್ಧಹಸ್ತರಾದ ಅಪ್ಪಟ ದೇಶಪ್ರೇಮಿ. ಅರಳು ಹುರಿದಂತೆ ಮಾತನಾಡುತ್ತಾ ಸ್ವಾತಂತ್ರ್ಯದ ಮಹತ್ವವನ್ನು ಸಾರ್ವಜನಿಕ ಭಾಷಣಗಳಲ್ಲಿ ವಿವರಿಸುತ್ತಿದ್ದ ಬಿ. ಎಲ್. ಸುಬ್ಬಮ್ಮನವರ ಚಿಕ್ಕಮಗಳೂರಿನ ಹೋರಾಟಕ್ಕೂ ಸ್ಫೂರ್ತಿಯಾದವರು. ಇವರೊಂದಿಗೆ ಹಲವು ಹೋರಾಟಗಾರರ ಒಡನಾಡ ವಿವಿಧೆಡೆ ಉಲ್ಲೇಖಗೊಂಡಿದೆ.

## ಕಳಸಾಪುರಕ್ಕೆ ಬಳ್ಳಾರಿಸುಬ್ಬಮ್ಮ

ಕೆ. ಎಲ್. ನಾಗಪ್ಪಯ್ಯ ೧೯೪೦ರ ದಶಕದಲ್ಲಿ ಕಳಸಾಪುರ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಪಕ್ಕದ ಬೆಳವಾಡಿಯಲ್ಲಿ ಹೊಯ್ಸಳರ ದೇವಾಲಯ ಇದ್ದುದರಿಂದ ಆಗಲೇ ಈ ಪ್ರದೇಶ ಪ್ರವಾಸಿಗರನ್ನು ಸೆಳೆಯುತ್ತಿತ್ತು. ಶಿಕ್ಷಕರಾಗಿದ್ದ ನಾಗಪ್ಪಯ್ಯ ಕೆಲಸಕ್ಕೆ ರಾಜೀನಾಮೆ ನೀಡಿ ಪಾನ ನಿರೋಧಿ ಚಳುವಳಿಯನ್ನು ಈ ಭಾಗದಲ್ಲಿ ಮುನ್ನಡೆಸುತ್ತಾರೆ. ಪೊಲೀಸರ ಪೆಟ್ಟುತಿಂದು ಐದಾರು ತಿಂಗಳ ಜೈಲುವಾಸ ಅನುಭವಿಸಿದರೂ ಹೋರಾಟ ಬಿಡಲಿಲ್ಲ.

ಕೆ. ಸಿ. ರಾಮಚಂದ್ರಪ್ಪ ಕೈಜೋಡಿಸಿದ ಮೇಲೆ ಪ್ರಭಾತ್‌ಭೇರಿ, ತ್ರಿವರ್ಣ ಧ್ವಜಾರೋಹಣ ಈ ಭಾಗದಲ್ಲಿ ಸರ್ವೇ ಸಾಮಾನ್ಯವಾಗಿ ಪರಿಣಾಮ ೧೫ದಿನಗಳ ಜೈಲುವಾಸ ಅನುಭವಿಸುತ್ತಾರೆ. ತಾಳೀಕೆರೆ ಸುಬ್ರಮಣ್ಯ, ಬಳ್ಳಾರಿಸುಬ್ಬಮ್ಮ ಮತ್ತಿತರರನ್ನು ಊರಿಗೆ ಕರೆಸಿ ಸಭೆ ನಡೆಸುತ್ತಾರೆ.



ಕಳಸಾಪುರದ ಗುಂಡಪ್ಪರಾಮಸ್ವಾಮಿ ಬೇಲೂರಿನಲ್ಲಿ ಮಾಧ್ಯಮಿಕ ಶಿಕ್ಷಣ ಪಡೆಯುವಾಗ ಪ್ರಭಾತ್ ಭೇರಿಯಿಂದ ಆಕರ್ಷಿತರಾಗುತ್ತಾರೆ. ಶಾಲೆ ತೊರೆದು ಚಳುವಳಿಗೆ ಹಾಜರಾಗುತ್ತಿದ್ದ ಇವರು ಮಾತೃ ವಿಯೋಗದ ನಂತರ ಕಳಸಾಪುರಕ್ಕೆ ವಾಸ್ತವ್ಯ ಬದಲಾಯಿಸಿ ಅಲ್ಲಿನ ಹೋರಾಟಕ್ಕೆ ಕೈ ಜೋಡಿಸುತ್ತಾರೆ.

## ವೀರಸ್ತಂಭ ಸ್ಥಾಪನೆ

ಸಖರಾಯಪಟ್ಟಣದ ಸ. ನಾ. ಅನಂತರಾಮಯ್ಯ ಪ್ರೌಢಶಿಕ್ಷಣಕ್ಕಾಗಿ ತರೀಕೆರೆಯ ಮುನ್ಸಿಪಲ್ ಹೈಸ್ಕೂಲ್ ಸೇರಿದಾಗ ಚಳುವಳಿ ಆಕರ್ಷಿಸುತ್ತದೆ. ಟಿ. ಸಿ. ಬಸಪ್ಪ, ಹಂಜಿಶಿವಣ್ಣ, ಎಚ್. ಎಂ. ಮಲ್ಲಿಕಾರ್ಜುನಪ್ಪ ಮತ್ತಿತರರ ನೇತೃತ್ವದಲ್ಲಿ ನಡೆದ ಪ್ರಭಾತ್ ಭೇರಿಗಳಲ್ಲಿ ವಿವಿಧೆಡೆ ಹೋರಾಟದಲ್ಲಿ ಪಾಲ್ಗೊಂಡು ಸ್ಫೂರ್ತಿ ಆಗುತ್ತಾರೆ. ಅಲ್ಲಿ ಪಿಕೆಟಿಂಗ್‌ನಲ್ಲಿ ಪಾಲ್ಗೊಂಡಾಗ ಪೊಲೀಸರ ಲಾಠಿ ತಪ್ಪಿಸಿಕೊಳ್ಳಲು ಹೆದರಿ ಓಟಾ ಕಿತ್ತವರು ಕಡೂರು ಮೂಲಕ ಸಖರಾಯಪಟ್ಟಣ ಸೇರಿದ ಮೇಲೆ ಸಮಾಧಾನಪಡುತ್ತಾರಂತೆ.

ಚಿಕ್ಕಮಗಳೂರು, ಕಡೂರು, ಕಳಸಾಪುರ, ನಿಡಘಟ್ಟದಲ್ಲಿ ನಡೆದ ಕೆಲವು ಹೋರಾಟಗಳಲ್ಲಿ ಕೈ ಜೋಡಿಸುತ್ತಾರೆ. ನಿಡಘಟ್ಟದಲ್ಲಿ ಎಂ. ಚಂದ್ರಶೇಖರಯ್ಯ ಅವರ ಅಧ್ಯಕ್ಷತೆಯಲ್ಲಿ ರಾಜ್ಯದ ಪ್ರಮುಖ ಹೋರಾಟಗಾರ ಕೆ. ಟಿ. ಭಾಷ್ಯಂ ವೀರಸ್ತಂಭ ಸ್ಥಾಪಿಸಿ ಸ್ವಾತಂತ್ರ್ಯ ಕಹಳೆ ಊದಿದ್ದನ್ನು ಅನಂತ ರಾಮಯ್ಯ ಸ್ಮರಿಸುತ್ತಿದ್ದರು.

## ಸಿ. ಆರ್. ಶಂಕರಪ್ಪ

ವಿದ್ಯಾರ್ಥಿ ದಿಸೆಯಲ್ಲೆ ೧೯೧೮ರಲ್ಲಿ ಶ್ರೀರಂಗಶೆಟ್ಟಿ ಮತ್ತು ತಿಮ್ಮಮ್ಮ ದಂಪತಿಗಳ ಪುತ್ರರಾಗಿ ಜನಿಸಿದ ಸಿ. ಆರ್. ಶಂಕರಪ್ಪ ರಾಷ್ಟ್ರದ ಕೂಗಿಗೆ ಸ್ಪಂದಿಸಿ ಸುಭಾಷ್ ಚಂದ್ರಬೋಸ್, ಗಾಂಧೀಜಿ ವಿಚಾರಗಳಿಂದ ಪ್ರೇರೇಪಣೆ ಪಡೆದವರು. ವಿದ್ಯಾರ್ಥಿಗಳ ಜೊತೆಗೂಡಿ ಪ್ರಭಾತ್ ಭೇರಿ ನಡೆಸಿ ಧ್ವಜ ಮೆರವಣಿಗೆ ಮೂಲಕ ಗಮನ ಸೆಳೆಯುತ್ತಾರೆ. ಶಾಲೆ ತೊರೆದು ಹೆಚ್ಚಿನ ಸಮಯ ಚಳುವಳಿಯಲ್ಲೇ ಆಸಕ್ತಿ ವಹಿಸುತ್ತಾರೆ. ಕುಟುಂಬದ ಜವಾಬ್ದಾರಿಯಿಂದ ದೇಶದ ಜವಾಬ್ದಾರಿಯತ್ತ ಹೊರಳಿದ ಶಂಕರಪ್ಪ, 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಗೆ ಪೂರ್ಣ ತೊಡಗಿಸಿಕೊಂಡವರು.

'ಮಾಡು ಇಲ್ಲವೇ ಮಡಿ' ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯದ ರಣಕಹಳೆ ಮೊಳಗಿಸಿ ಆಳರಸರಿಗೆ ಸಿಂಹ ಸ್ವಪ್ನರಾಗಿ ಕಾಡುತ್ತಾರೆ. ಕಷ್ಟಪಟ್ಟು ಕೊನೆಗೂ ಸೆರೆಹಿಡಿದ ಪೊಲೀಸರು ನ್ಯಾಯಾಲಯಕ್ಕೆ ಒಪ್ಪಿಸಿದಾಗ ಕಠಿಣ ಸಜೆ ನಂತರ ಸಿಂಗಲ್ ಸೆಲ್ ಶಿಕ್ಷೆಯಾಗುತ್ತದೆ. ಜೈಲಿನೊಳಗೂ ಸತ್ಯಾಗ್ರಹ ಮಾಡುತ್ತಾರೆ. ಹೊರ ಬಂದ ನಂತರವೂ ತಮ್ಮ ಪೂರ್ಣಶಕ್ತಿ ಹುಮ್ಮಸ್ಸನ್ನು ಹೋರಾಟಕ್ಕೆ ಧಾರೆಯೆರೆದ ಶಂಕರಪ್ಪ ನೇರ ನಡೆನುಡಿಯ ವಿಚಿತ್ರ ಸ್ವಭಾವದ ನಿಷ್ಠೂರವಾದಿ ಯೋಧ.

### ನಾರಾಯಣ ನಾಯ್ಕ

ರೈತ ಗೋಪಾಲಕೃಷ್ಣ ನಾಯ್ಕ ಮತ್ತು ಚಂದ್ರಮ್ಮ ಅವರ ದ್ವಿತೀಯ ಪುತ್ರರಾಗಿ ೧೯೧೬ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದ ನಾರಾಯಣನಾಯ್ಕ ವಿಶ್ವವಿದ್ಯಾಲಯ ಶಾಲೆಯಲ್ಲಿ ಲೋಯರ್ ಸೆಕೆಂಡರಿ ವಿದ್ಯಾಭ್ಯಾಸ ಮಾಡಿದವರು. ಗಾಂಧೀಜಿ ಚಿಕ್ಕಮಗಳೂರಿಗೆ ಬಂದಾಗ ದರ್ಶನ ಮಾಡಿ ಭಾಷಣ ಕೇಳಿ ಪ್ರೇರೇಪಣೆಗೊಂಡವರು.

ಕಾನೂನು ಭಂಗದ ಚಳುವಳಿಯಲ್ಲಿ ತೊಡಗಿಸಿಕೊಂಡ ಕಾರಣಕ್ಕಾಗಿ ೧೯೩೯ರಲ್ಲಿ ಪಬ್ಲಿಕ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಒಂದು ವರ್ಷ ತುರಂಗವಾಸ ಅನುಭವಿಸುತ್ತಾರೆ. ರೈತಾಪಿ ಕುಟುಂಬದ ಕೃಷಿ ಕಾರ್ಯವನ್ನು ಕಡೆಗಣಿಸಿ ಹಲವು ಸ್ನೇಹಿತರೊಂದಿಗೆ ಕಾಂಗ್ರೆಸ್ ಚಳುವಳಿಯಲ್ಲಿ ಸಕ್ರಿಯರಾಗುತ್ತಾರೆ. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅನಿರ್ದಿಷ್ಟ ಅವಧಿಯವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು 'ಸುವರ್ಣ' ಹೊತ್ತಿಗೆ ದಾಖಲಾಗಿದೆ.

### ಕರ್ತಿಕೆರೆಯ ಅರಸ್

ನಗರದ ಸೆರಗಿನಲ್ಲಿರುವ ಕರ್ತಿಕೆರೆ ಗ್ರಾಮದಲ್ಲಿ ಕಲ್ಲೇದಾರ್ ತಿರುಮಲರಾವ್ ಮತ್ತು ಮಲ್ಲಮ್ಮಣಿ ಪುತ್ರರಾಗಿ ಜನಿಸಿದ ಕೆ. ಟಿ. ರಾಮರಾಜೆ ಅರಸ್ ವಿದ್ಯಾರ್ಥಿಯಾಗಿದ್ದಾಗಲೇ ಗಾಂಧೀಜಿ ಕರೆಗೆ ಓಗೊಟ್ಟವರು. ಜೊತೆಗಾರ ಹುಡುಗರನ್ನು ಸ್ವಾತಂತ್ರ್ಯ ಚಳುವಳಿಯತ್ತ ಕರೆ ತರಲು ಶ್ರಮಿಸಿದ ತರುಣ. ದೇಶದ ದಾಸ್ಯದ ನೊಗ ಕಿತ್ತೊಗೆದು ಸ್ವಾತಂತ್ರ್ಯದ ಧ್ವಜ ಹಾರಿಸುವ ಬಯಕೆ ವ್ಯಕ್ತಪಡಿಸುತ್ತಾನೆ. ೧೯೪೨ರ ಚಳುವಳಿಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಎಂಟು ತಿಂಗಳು ಜೈಲುವಾಸ ಅನುಭವಿಸುತ್ತಾರೆ.



ಬಂಧನದಲ್ಲಿದ್ದಾಗಲೂ ಹೋರಾಟ ಮಾಡಿದರು. ಅಲ್ಲಿರುವ ಮರಗಳನ್ನು ಕಡಿಯದಂತೆ ತಡೆವೊಡ್ಡಿ ಲಾಠಿಪೆಟ್ಟು ತಿಂದು ಉಪವಾಸ ಸತ್ಯಾಗ್ರಹ ಕೂತವರು.

ಜೈಲಿನಿಂದ ಹೊರಬಂದ ಮೇಲೆ ವಿದ್ಯಾಭ್ಯಾಸ ಮುಂದುವರೆಸಿ ವೈದ್ಯಕೀಯ ಪದವಿ ಪಡೆದು ಸರ್ಕಾರಿ ವೈದ್ಯರಾಗಿ ಸೇವೆ ಸಲ್ಲಿಸಿದವರು. ವಿಶ್ವ ಬ್ಯಾಂಕ್ ನೆರವಿನಿಂದ ಭಾರತ ಸರ್ಕಾರ ನಡೆಸುತ್ತಿದ್ದ ಕುಷ್ಠರೋಗ ನಿವಾರಣಾ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡ ಸಮಾಜಮುಖಿ ಚಿಂತಕ ಅರಸ್ ಆದರ್ಶ ಯೋಧ.

### ನ್ಯಾಯಾಧೀಶರ ರಾಜೀನಾಮೆಗೆ ಒತ್ತಾಯಿಸಿದ ಧೀರ

ಚಿಕ್ಕಮಗಳೂರಿನ ವರ್ತಕರ ಕುಟುಂಬದ ಕೆ. ಆರ್. ನಾರಾಯಣಶೆಟ್ಟಿ ಬಾಲ್ಯದಲ್ಲೆ ದೇಶದ ಬಗ್ಗೆ ಚಿಂತಿಸಿದ ಆದರ್ಶವಂತ. ಚಿಕ್ಕಮ್ಮ ತಮ್ಮ ಸ್ಫೂರ್ತಿ ಎಂದಿರುವ ಅವರು, ಗಾಂಧೀಜಿ ಚಿಕ್ಕಮಗಳೂರಿಗೆ ಬಂದಿದ್ದಾಗ ನಿಧಿ ಸಂಗ್ರಹದಲ್ಲಿ ತೊಡಗಿಸಿಕೊಂಡಿದ್ದನ್ನು ದಾಖಲಿಸಿದ್ದಾರೆ. ಗಂಗಾಧರ ದೇಶಪಾಂಡೆ ಅವರ ಅಚ್ಚುಕಟ್ಟಾದ ಅನುವಾದ ಕಿವಿ ತುಂಬಿ ಹೃದಯಾಂತರಾಳದಲ್ಲಿ ಹೋರಾಟದ ಕಿಚ್ಚನ್ನು ಹೆಚ್ಚಿಸಿತು ಎನ್ನುತ್ತಾರೆ.

ಮೆಟ್ರಿಕ್ಯುಲೇಷನ್‌ವರೆಗೆ ಶಾಲಾ ಶಿಕ್ಷಣ ಪಡೆದ ಶೆಟ್ಟರು, ಚಳುವಳಿಗೆ ಪೂರ್ಣ ತೊಡಗಿಸಿಕೊಳ್ಳಲು ಓದಿಗೆ ಶರಣು ಹೊಡೆಯುತ್ತಾರೆ. ೧೯೨೮ರ ಅಸಹಕಾರ ಚಳುವಳಿಯಲ್ಲೂ ಸಕ್ರಿಯವಾಗಿ ವಿದೇಶಿ ಬಟ್ಟೆ ಸುಟ್ಟು ಖಾದಿವಸ್ತ್ರ ಧರಿಸಲು ಹಲವರನ್ನು ಪ್ರೇರೇಪಿಸುತ್ತಾರೆ. ದೇಶದ ವಿವಿಧೆಡೆಯ ಹೋರಾಟದ ಮಜಲುಗಳನ್ನು ಅರ್ಥ ಮಾಡಿಕೊಂಡು ಸ್ಥಳೀಯ ಜನರಿಗೆ ತಿಳಿಸಿ ಸ್ಫೂರ್ತಿ ತುಂಬುತ್ತಾರೆ.

೧೯೩೦ರ ದಶಕದಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ಗಾಂಧೀಜಿ ಕರೆ ಕೊಟ್ಟಾಗ ಮಿತ್ರ ರಾಮಚಂದ್ರ ಶೆಟ್ಟಿಯೊಂದಿಗೆ ಮುಂಬೈಗೆ ತೆರಳಿ ಅಲ್ಲಿಯ ಕಾಂಗ್ರೆಸ್ ಭವನದಲ್ಲಿದ್ದು ಮಂಗಲದಾಸ್ ಮಾರುಕಟ್ಟೆ ಜಾಗದಲ್ಲಿ ಸಾರ್ವಜನಿಕವಾಗಿ ಉಪ್ಪು ತಯಾರಿಸುವಾಗ ಬಂಧನಕ್ಕೊಳಗಾಗುತ್ತಾರೆ. ನ್ಯಾಯಾಲಯದಲ್ಲಿ ತಮ್ಮ ಕೃತ್ಯವನ್ನು ಪ್ರಬಲವಾಗಿ ಸಮರ್ಥಿಸಿಕೊಂಡ ನಾರಾಯಣಶೆಟ್ಟಿ, ನ್ಯಾಯಾಧೀಶರಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ದೇಶದ ಕಾರ್ಯದಲ್ಲಿ ತೊಡಗುವಂತೆ ತಾಕೀತು ಮಾಡಿದ ಧೀರ. ಏಳೂವರೆ ತಿಂಗಳ ಜೈಲುವಾಸವನ್ನು

ಪೂನಾ, ಯರವಾಡ, ಅಹಮ್ಮದ್ ನಗರದ ವೀಸಾಪುರ ಬಂಧಿಖಾನೆಗಳಲ್ಲಿ ಅನುಭವಿಸಿ ಹೊರ ಬರುತ್ತಾರೆ.

## ಜನಕರಾಜ ಗುಪ್ತ

ಚಿಕ್ಕಮಗಳೂರಿನ ವರ್ತಕ ಕುಟುಂಬದಲ್ಲಿ ೧೯೨೩ರಲ್ಲಿ ಹುಟ್ಟಿದ ಎಂ. ಎನ್. ಜನಕರಾಜಗುಪ್ತ ಅವರ ತಂದೆ ಎಂ. ನಿರ್ವಾಣಪ್ಪಶೆಟ್ಟಿ ತಾಯಿ ಗೌರಮ್ಮ. ವಿದ್ಯಾರ್ಥಿ ಹಂತದಲ್ಲೆ ಸ್ವಾತಂತ್ರ್ಯದ ಕನಸು ಕಂಡವರು. ಏಳನೆಯ ತರಗತಿಯಲ್ಲಿ ಓದುತ್ತಿರುವಾಗ ಪ್ರಭಾತ್ ಭೇರಿಯಲ್ಲಿ ಪಾಲ್ಗೊಳ್ಳುತ್ತಿದ್ದವರು. ಪರೀಕ್ಷೆ ಮುಗಿದ ನಂತರ ಸತ್ಯಾಗ್ರಹಕ್ಕೆ ಇಳಿಯುತ್ತಾರೆ. ಕ್ವಿಟ್ ಇಂಡಿಯಾ ಚಳುವಳಿಯ ಕಾವು ವ್ಯಾಪಕವಾಗಿದ್ದಾಗ ಬ್ರಿಟಿಷರ ವಿರುದ್ಧ ಜನ ಜಾಗೃತಿಗೊಳಿಸಿದ್ದಕ್ಕಾಗಿ ೧೯೪೨ರ ಸೆಪ್ಟಂಬರ್ ೦ರಂದು ಬಂಧನಕ್ಕೊಳಗಾಗುತ್ತಾರೆ.

## ಜೈಲೊಳಗೆ 'ಭಗವದ್ಗೀತೆ' ಅಧ್ಯಯನ

ಚಿಕ್ಕಮಗಳೂರಿನ ಜಿಲ್ಲಾ ಉಪ ಕಾರಾಗೃಹದಲ್ಲಿ ಹಲವು ಹೋರಾಟಗಾರರ ಜೊತೆ ಸಮಾಲೋಚನೆ ಪರಿಣಾಮ ಹೋರಾಟದ ಕಿಚ್ಚು ಮತ್ತಷ್ಟು ಹೆಚ್ಚುತ್ತದೆ. ಜೈಲೊಳಗೆ ಚರಕದಿಂದ ನೂಲು ತೆಗೆಯುವ ಮೂಲಕ ಬ್ರಿಟಿಷರ ಕಣ್ಣು ಕೆಂಪಾಗಿಸುತ್ತಾರೆ. 'ಭಗವದ್ಗೀತೆ' ಅಧ್ಯಯನ ಜೈಲಿನಿಂದ ಆರಂಭಗೊಳ್ಳುತ್ತದೆ. ಡಿಸೆಂಬರ್ ೦ರಂದು ಬಿಡುಗಡೆಗೊಳ್ಳುತ್ತಾರೆ. ಶಾಲೆಯನ್ನು ಬಿಡಿಸಿದ ತಂದೆ ಇವರನ್ನು ತಮ್ಮ ವ್ಯಾಪಾರಕ್ಕೆ ಜೊತೆ ಮಾಡಿಕೊಳ್ಳುತ್ತಾರೆ. ನಂತರವೂ ಸಣ್ಣ ಪ್ರಮಾಣದಲ್ಲಿ ಚಳುವಳಿಯಲ್ಲಿ ಮುಂದುವರೆಯುತ್ತಾರೆ. ಜೀವನ ಪರ್ಯಂತ ಖಾದಿಧಾರಿಗಳಾಗಿದ್ದರು. ಗಾಂಧೀಜಿ ಅವರ ತತ್ತ್ವಗಳಿಂದ ಹೆಚ್ಚು ಪ್ರಭಾವಿತರಾಗಿದ್ದು ಚರಕದಿಂದ ನೂಲು ತೆಗೆಯುವ, ಭಗವದ್ಗೀತೆ ಪಠಣ, ಭಜನೆ, ಸತ್ಸಂಗಗಳನ್ನು ಮನೆಯಲ್ಲಿ ನಡೆಸುತ್ತಿದ್ದರೆಂದು ಅವರ ಪುತ್ರಿ ಎಂ. ಜೆ. ನಾಗಲಕ್ಷ್ಮೀ ಸ್ಮರಿಸುತ್ತಾರೆ.

## ಸಿರಿವಂತ ಸ್ವಯಂ ಸೇವಕ: ಎಂ. ಎಲ್. ವಿ

ಚಿಕ್ಕಮಗಳೂರಿನ ಎಂ. ಲಕ್ಷ್ಮಿಶೆಟ್ಟರ ಸಿರಿವಂತ ಕುಟುಂಬದಲ್ಲಿ ೧೯೧೬ರಲ್ಲಿ ಜನಿಸಿದ ಎಂ. ಎಲ್. ವಾಸುದೇವ ಮೂರ್ತಿ, ಮಹಾತ್ಮಾಗಾಂಧೀಜಿ ೧೯೨೭ರಲ್ಲಿ ಚಿಕ್ಕಮಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ವಯಂ ಸೇವಕನಾಗಿ ಕರ್ತವ್ಯ ನಿರ್ವಹಿಸಿ ಸ್ಫೂರ್ತಿ ಪಡೆದವರು. ಅಣ್ಣ ಎಂ. ಎಲ್. ನಾಗಪ್ಪಶೆಟ್ಟಿ ಆ ಕಾರ್ಯಕ್ರಮದ



ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಗಾಂಧೀಜಿ ದಂಪತಿಗಳ ಆಶೀರ್ವಾದ ಪಡೆದ ನಂತರ ಅಂದಿನಿಂದಲೇ ಪಾನ ನಿರೋಧ, ಸ್ವದೇಶಿ ಆಂದೋಲನದಲ್ಲಿ ಸಕ್ರಿಯರಾಗುತ್ತಾರೆ. ಪೊಲೀಸರ ಪೆಟ್ಟು ಕಂಗೆಡಿಸಲಿಲ್ಲ.

## ರೈತ ಮಕ್ಕಳ ಹೋರಾಟ

೧೯೨೩ರಲ್ಲಿ ಚಿಕ್ಕಮಗಳೂರಿನಲ್ಲಿ ರೈತಾಪಿ ಕುಟುಂಬದಲ್ಲಿ ಹುಟ್ಟಿದ ಎ. ಎಚ್. ಸಂಜೀವಪ್ಪ ನಾಯ್ದು ಶಿವಮೊಗ್ಗದಲ್ಲಿ ಇಂಟರ್ ಮಿಡಿಯಟ್ ಓದುತ್ತಿದ್ದಾಗಲೇ ಅಲ್ಲಿಯ ಹೋರಾಟದಲ್ಲಿ ಆಕರ್ಷಿತರಾದವರು. ಮೈಸೂರಿನಲ್ಲಿ ಮಹಾರಾಜ ಕಾಲೇಜಿನ ಅರ್ಥಶಾಸ್ತ್ರ ಪದವಿ ಪಡೆದರೂ ಹೋರಾಟದ ನಂಟು ಕಳಚಲಿಲ್ಲ. ಚಿಕ್ಕಮಗಳೂರಿನಲ್ಲಿ ಎಂಟು ಮೈಲಿಗಳವರೆಗೆ ಗೆಳೆಯರ ತಂಡ ಕಟ್ಟಿಕೊಂಡು ಟೆಲಿಫೋನ್ ತಂತಿಗಳನ್ನು ಕತ್ತರಿಸಿ ಸಂಪರ್ಕ ಮಾಧ್ಯಮ ನಾಶ ಮಾಡಿದ ಆರೋಪಕ್ಕಾಗಿ ಜೈಲುವಾಸ ಅನುಭವಿಸುತ್ತಾರೆ. ಹಲವು ಹೋರಾಟಗಳಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಾರೆ.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನಲೆಯ ರೈತಾಪಿ ಮನೆತನದಲ್ಲಿ ೧೯೩೦ರಲ್ಲಿ ಹುಟ್ಟಿದ ಶ್ರೀನಿವಾಸನಾಯ್ದು ಬಡತನದ ಬೇಗೆಯಲ್ಲಿ ಬೆಂದರೂ ಆದರ್ಶದ ಗುಣ ಮೈಗೂಡಿಸಿಕೊಂಡವರು. ಚಿಕ್ಕಪ್ಪಂದಿರಾದ ನಾಯಾಯಣ ನಾಯ್ಕ ಮತ್ತು ಸಂಜೀವಪ್ಪ ನಾಯ್ದು ಪ್ರಭಾವದಿಂದ ವಿದ್ಯಾರ್ಥಿ ದಿಸೆಯಲ್ಲೆ ಪ್ರೇರೇಪಿತಗೊಂಡು ಹೋರಾಟದ ದೀವಿಗೆ ಮುನ್ನಡೆಸಿದವರು. ಬಿ. ಎ. ಪದವೀಧರರಾದರೂ ಸರ್ಕಾರಿ ಕೆಲಸಕ್ಕೆ ಜೋತು ಬೀಳದೆ ಸ್ವಂತ ಸಾರಿಗೆ ಉದ್ಯಮ ನಡೆಸಿ ಮೇಲೆ ಬಂದವರು.

## ಬ್ರಿಟಿಷರ ಯುದ್ಧ ನಿಧಿಗೆ ಅಡ್ಡಿ

೧೯೨೬ರಲ್ಲಿ ಜನಿಸಿದ ಡಿ. ಎಸ್.ಕೃಷ್ಣಮೂರ್ತಿ ಶಾಲಾದಿನಗಳಲ್ಲಿ ಪ್ರಭಾತ್ ಭೇರಿಯಲ್ಲಿ ಪಾಲ್ಗೊಂಡವರು. ಗಾಂಧೀಜಿ ಅವರ ಕರೆಗೆ ಓಗೊಟ್ಟ ಯುವಕರ ತಂಡದೊಂದಿಗೆ ಇಂದಿನ ಆಜಾದ್ ಮೈದಾನವೆಂದು ಕರೆಯುವ ಸ್ಥಳವನ್ನು ಅಡ್ಡೆಯಾಗಿಸಿಕೊಂಡು ಸಭೆಗಳನ್ನು ನಡೆಸುತ್ತಿರುತ್ತಾರೆ. ಎ. ಎಂ. ವಿಶ್ವನಾಥ್‌ರಾವ್, ಮೋಹನದಾಸ ಶೆಣೈ, ಪುಟ್ಟಸ್ವಾಮಿ, ಕೆ. ವಿ. ಮರುಳಯ್ಯ, ಯು.ಸಿ.ಮರುಳಸಿದ್ದಪ್ಪ, ಎಸ್. ಕೃಷ್ಣಶೆಟ್ಟಿ, ಅಚ್ಯುತಪ್ರಭು, ಜನಕರಾಜ ಗುಪ್ತ ಮತ್ತಿತರರೊಂದಿಗೆ ಶಾಲೆ ಬಹಿಷ್ಕಾರ, ಕರ ನಿರಾಕರಣೆ, ಮದ್ಯಪಾನ ನಿರೋಧ ಚಳುವಳಿಯಲ್ಲಿ

ತೊಡಗಿಸಿಕೊಂಡವರು. ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ಸರ್ಕಾರದ ಯುದ್ಧನಿಧಿಗೆ ಹಣ ನೀಡದಂತೆ ಜನರ ಮನವೊಲಿಸುವ ಮೂಲಕ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗುತ್ತಾರೆ.

ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಬಂಧನಕ್ಕೆ ಒಳಗಾದಾಗ ಅಧಿಕಾರಿಗಳು ಕ್ಷಮಾಪಣೆ ಪತ್ರ ಬರೆದುಕೊಟ್ಟು ಚಳುವಳಿಯಿಂದ ಹಿಂದೆ ಸರಿದರೆ ಬಿಡುಗಡೆಗೊಳಿಸುವ ಆಮಿಷ ಒಡ್ಡುತ್ತಾರೆ. ತಾವಷ್ಟೇ ಅಲ್ಲ ತಮ್ಮ ತಂದೆಯವರೂ ಅಧಿಕಾರಿಗಳ ಪ್ರಸ್ತಾಪ ತಿರಸ್ಕರಿಸುತ್ತಾರೆಂದು ದಾಖಲಿಸಿರುವ ಕೃಷ್ಣಮೂರ್ತಿ, ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಜೈಲು ಶಿಕ್ಷೆ ಅನುಭವಿಸುವಾಗ ಅದೇ ಜೈಲಿನಲ್ಲಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಸಂದರ್ಶಿಸಲು ಬಯಸಿದ ಯುವ ತಂಡಕ್ಕೆ ಅವಕಾಶ ಸಿಗದಿದ್ದಾಗ ಅಲ್ಲೇ ಧರಣಿ ನಡೆಸಿ ಕೊನೆಗೂ ಭೇಟಿ ಮಾಡಿದ್ದಾಗಿ ವಿವರಿಸುತ್ತಾರೆ.

## ಪ್ರತಿಭಾವಂತ ಯೋಧ

ಚಿಕ್ಕಮಗಳೂರಿನ ಶಂಕರಪುರ ನಿವಾಸಿ ಮಂಜುನಾಥ್ ರಾವ್ ಮತ್ತು ಪುಟ್ಟಮ್ಮ ದಂಪತಿಗಳ ಪುತ್ರನಾಗಿ ೧೯೨೫ರಲ್ಲಿ ಜನಿಸಿದ ಎಂ. ಮೈಲಾರಿರಾವ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿ. ತಾರುಣ್ಯದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕಾಣಿಸಿಕೊಳ್ಳುತ್ತಾರೆ. ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಹೆಚ್ಚು ಸಕ್ರಿಯರಾಗಿ ಸೆರೆವಾಸ ಅನುಭವಿಸಿದವರು.

ಶಂಕರಪುರ ವಾಸಿಯಾಗಿದ್ದ ಮಧುರೆ ಮುತ್ತುಮೊದಲಿಯಾರ್ ಮತ್ತು ಚಿನ್ನಮ್ಮ ದಂಪತಿಗಳ ಪುತ್ರನಾಗಿ ೧೯೨೧ರಲ್ಲಿ ಮೂಡಿಗೆರೆಯಲ್ಲಿ ಜನಿಸಿದ ವಿ. ಎಂ. ಜಿ. ಮೊದಲಿಯಾರ್ ಸಂಗೀತ, ಹರಿಕಥೆಯಲ್ಲಿ ವಿಶೇಷ ಆಸಕ್ತಿ ವಹಿಸಿದವರು. ಕುಟುಂಬದೊಂದಿಗೆ ಚಿಕ್ಕಮಗಳೂರಿನಲ್ಲಿ ನೆಲೆಸಿದ್ದ ಅವರನ್ನು ಸ್ವಾತಂತ್ರ್ಯ ಚಳುವಳಿ ಸೆಳೆಯಿತು. ಪೊಲೀಸರ ಲಾಠಿ ಪೆಟ್ಟು ತಿಂದರೂ ಜಗ್ಗದಿದ್ದಾಗ ಒಮ್ಮೆ ಹದಿನೈದು ದಿನಗಳ ಜೈಲುವಾಸ ಅನುಭವಿಸುತ್ತಾರೆ.

## ಅಂಬಳೆ ಪೋರನ ಹೋರಾಟ

ರೈತ ಜಂಗಮ ಕುಟುಂಬದ ಬಸವಣ್ಣಯ್ಯ ಮತ್ತು ಮರುಳಸಿದ್ದಮ್ಮ ದಂಪತಿಗಳ ಪುತ್ರನಾಗಿ ಅಂಬಳೆ ಗ್ರಾಮದಲ್ಲಿ ೧೯೧೬ರಲ್ಲಿ ಜನಿಸಿದ ಎ. ಬಿ.



ಬಸವಾರಾಧ್ಯರು ಬಾಲ್ಯದಲ್ಲೆ ಗಾಂಧೀಜಿಯನ್ನು ದರ್ಶಿಸಿದವರು. ಪ್ರಭಾತ್‌ಭೇರಿ, ಶಾಲಾ ಬಹಿಷ್ಕಾರ ಪ್ರೇರೇಪಿಸುತ್ತಾ ಹೋರಾಟದಲ್ಲಿ ತೊಡಗಿಸಿಕೊಂಡವರು. ಶಿವಮೊಗ್ಗಕ್ಕೆ ತೆರಳಿ ಕೈ ಬಾಂಬ್ ತಯಾರಿಸಲು ಪ್ರಯತ್ನಿಸಿದವರು. ಬಾಣಾವರ ರೈಲ್ವೆ ನಿಲ್ದಾಣವನ್ನು ಧ್ವಂಸಗೊಳಿಸಿದಾಗ ಪೊಲೀಸರಿಂದ ಪೆಟ್ಟು ತಿಂದು ತಪ್ಪಿಸಿಕೊಂಡು ಬಂದ ಹುಡುಗರಿಗೆ ಚಿಕ್ಕಮಗಳೂರಿನಲ್ಲಿ ವಸತಿ ಸೌಕರ್ಯ ಕಲ್ಪಿಸಿ ಡಾ. ರಘುನಾಥ್ ಅವರಿಂದ ಚಿಕಿತ್ಸೆ ಕೊಡಿಸಲು ನೆರವಾದವರು.

ಕಡೂರಿನ ಬೀರೂರು ಹೋಬಳಿಯ ಕರ್ತಿಕೆರೆ ಸಮೀಪ ಲಾರಿಯಲ್ಲಿ ಸಾಗಿಸುತ್ತಿದ್ದ ಸಾರಾಯಿಯನ್ನು ಅಡ್ಡಗಟ್ಟಿ ಚೆಲ್ಲಿದ ಗುಂಪಿನ ನಾಯಕರು. ದೂರವಾಣಿ ತಂತಿ ಕತ್ತರಿಸಿ ವರ್ಷದ ಕಠಿಣ ಸಜೆಗೆ ಒಳಗಾಗಿ ಬೆಂಗಳೂರು–ತುಮಕೂರು ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದವರು. ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಸಿದ ಧೀರ.

## ಶಾಲಾ ಬಾಲಕನ ಸೆರೆ

ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದ ಎಸ್. ಕೃಷ್ಣಮೂರ್ತಿ ಕೆಲವು ವಿದ್ಯಾರ್ಥಿಗಳು ತರಗತಿ ಧಿಕ್ಕರಿಸಿ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದನ್ನು ನೋಡಿ ಪ್ರೇರಣೆಗೊಂಡವರು. ಗೆಳೆಯರೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡು ವೇದಿಕೆಯೇರಿ ಬ್ರಿಟಿಷ್ ಸರ್ಕಾರದ ವಿರುದ್ಧ ಭಾಷಣ ಮಾಡಿದರು. ಮಾತು ಮುಗಿಯುತ್ತಿದ್ದಂತೆ ಸೆರೆ ಹಿಡಿದ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಮೂರು ತಿಂಗಳ ಸಜೆ ಆಯಿತು. ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಅಂದಿನ ಖ್ಯಾತ ಸ್ವಾತಂತ್ರ್ಯ ಸೇನಾನಿ ಕಮಲಾದೇವಿ ಚಟ್ಟೋಪಾಧ್ಯಾಯ ಆಗಮಿಸಿದಾಗ ಅವರನ್ನು ಭೇಟಿ ಮಾಡಲು ಹೊರಟಾಗ ತಡೆದ ಪೊಲೀಸರು ಗುಂಡು ಹಾರಿಸುವ ಬೆದರಿಕೆ ಒಡ್ಡುತ್ತಾರೆ. ಸಿದ್ದವನಹಳ್ಳಿ ಕೃಷ್ಣಶರ್ಮ ಮತ್ತು ಖಾದ್ರಿ ಶಾಮಣ್ಣ ಮಧ್ಯಸ್ಥಿಕೆಯಿಂದ ಅಪೇಕ್ಷೆ ಪಡುವ ಪ್ರತಿ ಹೋರಾಟಗಾರರಿಗೂ ಸರತಿಯಂತೆ ಕಮಲಾದೇವಿ ಅವರ ಭೇಟಿಗೆ ಅವಕಾಶ ಕಲ್ಪಿಸಲಾಯಿತು.

ಹಲವು ಬಾರಿ ತಮ್ಮ ಹಾಗೂ ಸ್ನೇಹಿತರ ಪರ ಟಿ. ಸೀತಾರಾಮಯ್ಯ ಮತ್ತು ಬಿ. ಕೆ. ನರಸಿಂಹಮೂರ್ತಿ ಉಚಿತ ವಕಾಲತ್ತು ವಹಿಸಿ ನೆರವಾದರೆಂದು ಕೃಷ್ಣಮೂರ್ತಿ ಸ್ಮರಿಸಿದ್ದಾರೆ.

## ಹುದ್ದೆ ತೊರೆದು ಹೋರಾಟಕ್ಕಿಳಿದ ಬಸಪ್ಪಶೆಟ್ಟಿ

ಆಲ್ದೂರಿನ ಕಾಫಿ ಬೆಳೆಗಾರ ಸಿರಿವಂತ ಕುಟುಂಬದಲ್ಲಿ ೧೯೦೧ರಲ್ಲಿ ಹುಟ್ಟಿದ ಬಿ. ಪಿ. ಬಸಪ್ಪಶೆಟ್ಟರ ತಂದೆ ಬಿ. ಪುಟ್ಟಣ್ಣಶೆಟ್ಟಿ ತಾಯಿ ಗಂಗಮ್ಮ. ಮಹಾದೈವಭಕ್ತ ಮನೆತನ. ಎಲೆಗುಡಿಗೆ ಕೂಲಿಮಠದಲ್ಲಿ ಅಕ್ಷರಭ್ಯಾಸ ಮಾಡಿ, ಚಿಕ್ಕಮಗಳೂರಿನಲ್ಲಿ ಪ್ರೌಢ ಶಿಕ್ಷಣ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪದವಿ. ವಿದ್ಯಾಭ್ಯಾಸದ ಸಂದರ್ಭದಲ್ಲೆ ಹಲವು ಹೋರಾಟಗಾರರ ಸಂಪರ್ಕ. ಮುಂಬೈಯ ದಾವರ್ಸ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಮಾಡಿದ ಬಸಪ್ಪಶೆಟ್ಟರನ್ನು ಸಾಮಾಜಿಕ ಕಾರ್ಯಗಳು ಸೆಳೆಯುತ್ತವೆ. ಮೈಸೂರಿನ ದಿವಾನ್ ಮಿರ್ಜಾ ಇಸ್ಮಾಯಿಲ್ 'ನೀವು ವಿದ್ಯಾವಂತರಾಗಿ ಹಳ್ಳಿಯಲ್ಲಿ ಇದ್ದು ಜನಜಾಗೃತಿ ಮೂಡಿಸಿ ಕೈಲಾದ ಸಹಾಯ ಮಾಡುತ್ತೀರೆಂದು ನಂಬಿದ್ದೇನೆ' ಎಂಬ ಮಾತುಗಳಿಂದ ಪ್ರೇರಣೆ ಪಡೆದು ಹಳ್ಳಿಯಲ್ಲಿ ನೆಲೆಸಲು ತೀರ್ಮಾನಿಸಿದರು.

ಅಂದೇ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದು ಜೊತೆಗೆ ಡಿಸ್ಟ್ರಿಕ್ಟ್ ಬೋರ್ಡ್ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದವರು. ಅಂದಿನ ಜನನಾಯಕರಾದ ಕೆ. ಸಿ. ರೆಡ್ಡಿ, ಎಚ್. ಜಿ. ಗುಂಡಪ್ಪಗೌಡ, ಭಾಷ್ಯಂ, ಹೊಸಕೊಪ್ಪ ಕೃಷ್ಣರಾವ್ ಅವರೊಂದಿಗಿನ ಸ್ನೇಹ ಸಂಬಂಧದಿಂದ ಸ್ವಾತಂತ್ರ್ಯ ಚಳುವಳಿಗೆ ಪಾದಾರ್ಪಣೆ ಮಾಡಿದ ಬಸಪ್ಪ ಶೆಟ್ಟಿ, ಅಸಹಕಾರ ಚಳುವಳಿ ಆರಂಭಗೊಂಡಾಗ ತಮ್ಮೆಲ್ಲ ಹುದ್ದೆಗೂ ರಾಜನಾಮೆ ನೀಡಿ ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತಾರೆ.

೧೯೪೨ರ ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಎಂದು ಸಭೆಗಳಲ್ಲಿ ಅಬ್ಬರಿಸುತ್ತಿದ್ದ ಬಸಪ್ಪ ಶೆಟ್ಟರನ್ನು ಹಲವು ಬಾರಿ ಬಂಧಿಸಿ ಪುನಃ ಬಿಡುಗಡೆ ಮಾಡುತ್ತಾರೆ. ೧೯೪೭ರ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟದಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸುತ್ತಾರೆ. ಸ್ವಾತಂತ್ರ್ಯಾನಂತರ ಮೈಸೂರು ವಿಧಾನ ಸಭೆಗೆ ತದನಂತರ ರಾಜ್ಯಸಭೆಗೂ ಸದಸ್ಯರಾಗಿ ಜಿಲ್ಲೆಯನ್ನು ಪ್ರತಿನಿಧಿಸಿದ ಸಜ್ಜನ ಮುಖಂಡ.

## ಹಲವರ ಸಹಭಾಗಿತ್ವ

ಸರಾಫ್ ರಾಮಚಂದ್ರರಾವ್, ಸಿ. ವಿ. ಧೃವರಾವ್, ಎಸ್. ಸುಬ್ಬರಾವ್, ಜನಕರಾಜ್ ಗುಪ್ತ ಮತ್ತು ಎಚ್. ಪಿ. ಸುಬ್ಬರಾವ್, ಕೆ. ವಿ. ನಂಜುಂಡಯ್ಯ, ಎಂ. ವಿ. ಗುರುಬಸಪ್ಪ ಶೆಟ್ಟಿ, ಎ. ಎಸ್. ಚಂದ್ರಶೇಖರ್, ಭಾಗಮನೆ ದೇವೇಗೌಡ, ಅಶ್ವಥ್‌ನಾರಾಯಣ ಶೆಟ್ಟಿ, ಡಿ. ಇ. ನಾರಾಯಣಗೌಡ, ರಾಜಭೂಷಣ ನಾಯ್ಡು ಮತ್ತಿತರರು ಚಿಕ್ಕಮಗಳೂರಿನಲ್ಲಿ ನಡೆದ ವಿವಿಧ ಹೋರಾಟಗಳಲ್ಲಿ ಪಾಲ್ಗೊಂಡು ಪೊಲೀಸರ ಲಾಠಿ ಪೆಟ್ಟಿಗೂ ಜಗ್ಗದೆ ಜೈಲುವಾಸವನ್ನೂ ಅನುಭವಿಸಿದ ಮಾಹಿತಿ ವಿವಿಧ ಮೂಲಗಳಿಂದ ಲಭ್ಯವಾಗುತ್ತದೆ.



## ಅಧಿವೇಶನಗಳಲ್ಲಿ ರಾಮಚಂದ್ರ ಶೆಟ್ಟಿ

ಬಾಲ್ಯದಿಂದಲೇ ರಾಷ್ಟ್ರೀಯ ವಿಚಾರಗಳಲ್ಲಿ ಆಸ್ಥೆವಹಿಸಿದ್ದ ಕೆ. ಎಂ. ರಾಮಚಂದ್ರಶೆಟ್ಟಿ ತನ್ನ ಚಿಕ್ಕಪ್ಪ ಚಿಕ್ಕಮಗಳೂರಿನ ಕೆ. ಸೂರಪ್ಪ ಶೆಟ್ಟರಿಂದ ಪ್ರೇರಣೆ ಪಡೆದವರು. ಇವರು ಬೆಳಗಾವಿಯ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಗಾಂಧೀಜಿ ಅವರ ವಿಚಾರಗಳಿಂದ ಪ್ರೇರಣೆಗೊಂಡು ವಿದೇಶಿ ವಸ್ತ್ರ-ವಸ್ತು, ಸೇಂದಿ-ಸಾರಾಯಿ ಬಹಿಷ್ಕಾರದ ಹೋರಾಟದಲ್ಲಿ ತೊಡಗಿಸಿಕೊಂಡವರು. ೧೯೨೭ರಲ್ಲಿ ಮಹಾತ್ಮಾಗಾಂಧೀಜಿ ಭೇಟಿಯನ್ನು ರಸವತ್ತಾಗಿ ಬಣ್ಣಿಸುತ್ತಾರೆ. ಶಿವಮೊಗ್ಗದಿಂದ ಭೂಪಾಳಂ ಚಂದ್ರಶೇಖರ ಅವರ ಕಾರಿನಲ್ಲಿ ಗಾಂಧೀಜಿ ಬಂದಿದ್ದರು. ಹಿಂದಿ ಮಾತುಗಳನ್ನು ಕರ್ನಾಟಕ ಕೇಸರಿ ಗಂಗಾಧರ ರಾವ್‌ದೇಶಪಾಂಡೆ, ಇಂಗ್ಲೀಷ್ ಭಾಷಣವನ್ನು ಭೂಪಾಳಂ ಚಂದ್ರಶೇಖರ್ ಕನ್ನಡೀಕರಿಸಿದ್ದರು.

## ಕಸ್ತೂರಬಾ ಸಭೆ?

ಚಿಕ್ಕಮಗಳೂರು ಪುರಸಭೆಯ ಹಿಂಭಾಗದಲ್ಲಿದ್ದ ಟೆನ್ನಿಸ್ ಕೋರ್ಟ್‌ನಲ್ಲಿ ಮಹಿಳೆಯರಿಗಾಗಿ ಕಸ್ತೂರ ಬಾ ಅವರ ಭಾಷಣ ಏರ್ಪಡಿಸಲಾಗಿತ್ತು. ಲಾಯರ್ ಸುಂದರಂ ಅಯ್ಯರ್‌ರ ಪತ್ನಿ ತಮ್ಮ ಚಿನ್ನದ ಬಳೆಗಳನ್ನು ಹರಿಜನ ನಿಧಿಗೆ ನೀಡಿದರೆ, ಹತ್ತುವರ್ಷದ ಬಾಲಕಿಯೋರ್ವಳು ತನ್ನ ಕೈಬೆರಳಿನ ಉಂಗುರವನ್ನೆ ಕಳಚಿಕೊಟ್ಟಳು' ಎಂದು ಡಾ. ಸೂರ್ಯನಾಥ ಕಾಮತ್ ೧೯೭೨ರಲ್ಲಿ ಸಂಪಾದಿಸಿರುವ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಕೃತಿಯಲ್ಲಿ ಸ್ವತಃ ರಾಮಚಂದ್ರಶೆಟ್ಟಿ ಬರೆದಿದ್ದಾರೆ.

## ರಾಮದಾಸ ಗಾಂಧಿ ಜೊತೆ ಸೆರೆವಾಸ

೧೯೩೨ರಲ್ಲಿ ಶಾಲಾ ಶಿಕ್ಷಣಕ್ಕೆ ಶರಣ ಹೊಡೆದು ಮುಂಬೈಗೆ ಹೋಗಿ ಕಾಂಗ್ರೆಸ್ ಹೌಸ್‌ನಲ್ಲಿ ಸೇರಿಕೊಂಡ ಶೆಟ್ಟರು ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಅಕ್ಟೋಬರ್ ೧೦ರಂದು ಮಂಗಲದಾಸ್ ಮಾರ್ಕೆಟ್

ಮುಂದಿನ ಚೌಕದಲ್ಲಿ ಒಲೆ ಹಚ್ಚಿ ಉಪ್ಪು ತಯಾರಿಸುವಾಗ ಬಂಧಿಸಲ್ಪಟ್ಟರು. ಅಲ್ಲಿಯ ಚಿಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ್ ಆರು ತಿಂಗಳ ಕಠಿಣ ಸಜೆ ಜೊತೆಗೆ ೫೦ರೂ. ಜುಲ್ಮಾನೆ ವಿಧಿಸುತ್ತಾರೆ. ಆರ್ಥರ್ ರಸ್ತೆಯ ಜೈಲಿನಲ್ಲಿ ಇರಿಸಿ ನಂತರ ಯರವಾಡ ಜೈಲಿಗೆ ಸ್ಥಳಾಂತರಿಸಲಾಗುತ್ತದೆ. ತಮ್ಮೊಂದಿಗೆ ರಾಮದಾಸ್‌ಗಾಂಧಿ ಇದ್ದರೆಂದು ಶೆಟ್ಟರು ಉಲ್ಲೇಖಿಸುತ್ತಾರೆ. ೧೯೩೩ರ ಏಪ್ರಿಲ್ ೨೭ರಂದು ಶಿಕ್ಷೆ ಮುಗಿದ ನಂತರ ಚಿಕ್ಕಮಗಳೂರಿಗೆ ವಾಪಾಸ್ಸಾಗುತ್ತಾರೆ. ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕುಲ ಬಾಂಧವರನ್ನು ಸೇರಿಸಿ ಅನುಭವಗಳನ್ನು ರಾಮಚಂದ್ರ ಶೆಟ್ಟಿ ನಿವೇದಿಸಿಕೊಳ್ಳುತ್ತಾರೆ.

### ಹಿಂದೂ ಮಹಾಸಭಾ ನಾಯಕರೊಂದಿಗೆ

೧೯೪೪ರಲ್ಲಿ ಶಿವಮೊಗ್ಗದಲ್ಲಿ ಆಲ್ ಇಂಡಿಯಾ ನೇಟಿವ್ ಸ್ಟೇಟ್ಸ್ ಕಾನ್ಫರೆನ್ಸ್‌ನಲ್ಲಿ ಭೂಪಾಳಂ ಮತ್ತು ವಿನಾಯಕ ದಾಮೋದರ್ ಸಾವರ್ಕರ್ ಭೇಟಿ ಮಾಡುತ್ತಾರೆ. ಹಿಂದೂ ಮಹಾಸಭಾದೊಂದಿಗೂ ಸಂಪರ್ಕ ಬೆಸೆಯುತ್ತದೆ. ೧೯೪೭ರಲ್ಲಿ ಕಾನೂನುಭಂಗ ಅಪರಾಧಕ್ಕಾಗಿ ಬಂಧನದ ವಾರೆಂಟ್ ಹೊರಡುತ್ತದೆ. ತಪ್ಪಿಸಿಕೊಂಡು ಮೈಸೂರು ಸೇರಿದ ಶೆಟ್ಟರು ಅಲ್ಲಿಯ ಸುಬ್ರಾಯನಕೆರೆ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ್ದನ್ನು ನೆನಪಿಸಿಕೊಳ್ಳುತ್ತಿದ್ದರು.

ಸ್ವಾತಂತ್ರ್ಯ ಸಿಕ್ಕ ನಂತರ ಚಿಕ್ಕಮಗಳೂರಿನಲ್ಲಿ ಮೆರವಣಿಗೆ ನಡೆಸಿ ಅನ್ನದಾನ ಮಾಡಿ ಸಂಭ್ರಮಿಸುತ್ತಾರೆ. ಗಾಂಧಿಜಿ, ನೆಹರು, ಸುಭಾಷ್, ಸರ್ದಾರ್ ಪಟೇಲ್ ಭಾವಚಿತ್ರಗಳನ್ನು ಅಲಂಕರಿಸಿ ಶ್ರೀಕನ್ಯಕಾ ಪರಮೇಶ್ವರಿ ದೇವಾಲಯದ ಅಷ್ಟಪೀಠ ರಥದಲ್ಲಿರಿಸಿ ಮೆರವಣಿಗೆ ಮಾಡಿದ ರಾಮಚಂದ್ರ ಶೆಟ್ಟರು ಹಾಸನದಲ್ಲಿ ಅಂತಿಮ ದಿನಗಳನ್ನು ಕಳೆಯುತ್ತಾರೆ.

### ಬಹಿಷ್ಕೃತ ಸಂಪಾದಕನಿಗೆ ನೆಲೆ

ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಕರ್ಕಿಯ ಗಣೇಶ್‌ರಾಮ ಯಾಜಿ 'ಕಾನಡಾ ಧುರೀಣ' ಪತ್ರಿಕೆಯ ಸಂಪಾದಕರಾಗಿದ್ದ ಸ್ವಾತಂತ್ರ್ಯ ಯೋಧ. ಉಪ್ಪಿನ ಸತ್ಯಾಗ್ರಹದಲ್ಲಿ ತುರಂಗ ಸೇರಿದವರು. ಬ್ರಿಟಿಷರು ಪತ್ರಿಕೆಯ ಮೇಲೆ ಪ್ರತಿಬಂಧ ಹೇರಿದಾಗ ಊರನ್ನೆ ತ್ಯಜಿಸಿ ಚಿಕ್ಕಮಗಳೂರಿಗೆ ಬಂದವರು.



೧೯೩೭ರ ಅಕ್ಷಯ ತದಿಗೆಯಂದು ಸ್ವಂತ ಮುದ್ರಣಾಲಯ ಆರಂಭಿಸಿ ಬದುಕು ಕಟ್ಟಿಕೊಳ್ಳುವುದರ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸುತ್ತಾರೆ. ೧೯೪೭ರ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ೧೫ದಿನಗಳ ಸೆರೆವಾಸ ಅನುಭವಿಸಬೇಕಾಗುತ್ತದೆ.

### ತಂದೆಯ ಹಾದಿಯಲ್ಲೆ ಮಗ

ಅವರ ಪುತ್ರ ಸುಬ್ರಾಯ ಗಣೇಶಯಾಜಿ ಬಾಲ್ಯದಲ್ಲೆ ತಂದೆಯಿಂದ ಪ್ರೇರಣೆ ಪಡೆದವರು. ಮೈಸೂರಿನಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿದ್ದಾಗ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಆಕರ್ಷಿಸುತ್ತದೆ. ಕಾಲೇಜನ್ನೇ ತೊರೆದ ಸುಬ್ರಾಯ ಗಣೇಶಯಾಜಿ ಚಿಕ್ಕಮಗಳೂರಿಗೆ ಹಿಂತಿರುಗಿ ಕಳಸಾಪುರ, ಮಾಗಡಿ ಮತ್ತಿತರ ಕಡೆಗಳಲ್ಲಿ ಹೆಂಡದ ಪೀಪಾಯಿ ಉರುಳಿಸಿ ಬಂಧನಕ್ಕೊಳಗಾಗುತ್ತಾರೆ. ಐದು ತಿಂಗಳ ಶಿಕ್ಷೆ ಮುಗಿದ ಮೇಲೆಯೂ ಡೆಟನ್ಯೂ ಆಗಿ ಜೈಲಿನಲ್ಲೆ ಉಳಿಯಬೇಕಾಗುತ್ತದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಟಿ. ಸುಬ್ರಮಣ್ಯಂ ಸಹ ಚಿಕ್ಕಮಗಳೂರು ಜೈಲಿನಲ್ಲಿ ಇವರೊಂದಿಗೆ ಕೆಲಕಾಲ ಸೆರೆವಾಸ ಅನುಭವಿಸಿದ್ದು ದಾಖಲಾಗಿದೆ.

### ವೆಂಕಟರಾವ್

ಚಿಕ್ಕಮಗಳೂರಿನ ಸಿ. ವಿ. ವೆಂಕಟರಾವ್ ಇಂಟರ್ ಮಿಡಿಯಟ್ ಓದಲು ಬೆಂಗಳೂರಿಗೆ ತೆರಳಿದಾಗ ೧೯೪೨ರ ಸ್ವಾತಂತ್ರ್ಯ ಹೋರಾಟ ಆಕರ್ಷಿಸುತ್ತದೆ. ಊರಿಗೆ ಮರಳಲು ರೈಲು ಏರಿದಾಗ ಎಲ್ಲೆಡೆ ಹೋರಾಟಗಾರರೆ ತುಂಬಿದ್ದರು. ತಿಪಟೂರಿಗೆ ಬಂದಾಗ ರೈಲ್ವೆನಿಲ್ದಾಣ ಕಛೇರಿ ಜಖಂಗೊಂಡಿರುತ್ತದೆ. ತಾವೂ ಕಲ್ಲು ಒಗೆದು ಖುಷಿ ಪಡುತ್ತಾರೆ. ಚಿಕ್ಕಮಗಳೂರು ಸೇರಿ ಸಿ.ಎಂ.ಎಸ್. ಶಾಸ್ತ್ರಿ ನೇತೃತ್ವದ ಯುವಕರ ಗುಂಪಿನೊಂದಿಗೆ ಹೋರಾಟಗಳಲ್ಲಿ ಪಾಲ್ಗೊಂಡ ಪರಿಣಾಮ ಬಂಧನ. ೧೯೪೩ರಲ್ಲಿ ಬಿಡುಗಡೆಗೊಂಡವರು ಬದುಕಿಗಾಗಿ ಉದ್ಯೋಗ ಅವಲಂಬಿಸುತ್ತಾರೆ.

### ರಂಗಕರ್ಮಿ ಬಾದರಾಯಣ ಹೋರಾಟ

ಚಿಕ್ಕಮಗಳೂರು ಮೂಲದ ಬಾದರಾಯಣ ನಾಟಕ ಕಲೆಯಲ್ಲಿ ನಿಸ್ಸೀಮರು. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿರುವಾಗ ಚಳುವಳಿ ಸೆಳೆಯಿತು. ೧೯೪೨ರ ಬ್ರಿಟಿಷರೇ ಭಾರತ

ಬಿಟ್ಟು ತೊಲಗಿ ಎಂದು ಘೋಷಣೆ ಕೂಗುತ್ತಾ ಬೀದಿಗಿಳಿಯುತ್ತಾರೆ. ಬದುಕಿಗೆ ಆಧಾರವಾಗಿದ್ದ ಉದ್ಯೋಗ ತೊರೆದು ಪೂರ್ಣ ಪ್ರಮಾಣದಲ್ಲಿ ಸ್ವಾತಂತ್ರ್ಯ ಸಮರಕ್ಕೆ ಅರ್ಪಿಸಿಕೊಳ್ಳುತ್ತಾರೆ. ಜೈಲುವಾಸ ನಂತರ ಆರೋಗ್ಯ ಹದಗೆಟ್ಟು ಚಿಕ್ಕಮಗಳೂರಿಗೆ ಹಿಂತಿರುಗಿ ಕಾಫಿಪುಡಿ ಉದ್ಯಮದಲ್ಲಿ ತೊಡಗಿಸಿಕೊಂಡು ಕೊನೆಯುಸಿರೆಳೆದವರು.

## ಮಾಸಾಶನ ನಿರಾಕರಿಸಿದ ಕಥೆಗಾರ

ಕನ್ನಡದ ಖ್ಯಾತ ಸಣ್ಣ ಕಥೆಗಾರ ಅಶ್ವಥ್ ಚಿಕ್ಕಮಗಳೂರಿನವರು. ಮೈಸೂರು ರಾಜ್ಯದ ಇಂಜಿನಿಯರ್ ಆಗಿದ್ದ ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಾರೆ. ಹೋರಾಟಕ್ಕಾಗಿ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟವರು. ಇಡೀ ಜೀವನ ಅಜ್ಞಾತವಾಗಿ ಸರಳವಾಗಿ ಬದುಕಿದ ಆದರ್ಶವಂತ. ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡ ಮಾಡುವ ಮಾಸಾಶನವನ್ನು ನಿರಾಕರಿಸಿದ ಧೀಮಂತ ಎಂದು ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣದಲ್ಲಿ ಡಾ. ರಹಮತ್ ತರೀಕೆರೆ ಉಲ್ಲೇಖಿಸಿ ಗೌರವ ಸಲ್ಲಿಸುತ್ತಾ ರಾಜ್ಯ ಪ್ರಶಸ್ತಿಯನ್ನೂ ನಿರಾಕರಿಸಿದ ಅಶ್ವಥ್ ಸಮಾಜಕ್ಕಿಂದು ಆದರ್ಶವಾಗಬೇಕು ಎಂದಿದ್ದರು.

## ಬೆಣ್ಣೆ ಸುಬ್ಬಯ್ಯ

ತಮಿಳುನಾಡಿನಲ್ಲಿ ಹುಟ್ಟಿದ್ದ ಎಂ. ವಿ. ಸುಬ್ಬಯ್ಯ ಬಾಲ್ಯದಲ್ಲೆ ಸ್ವಾತಂತ್ರ್ಯ ಹೋರಾಟಗಳಿಂದ ಆಕರ್ಷಿತರಾದವರು. ೧೯೩೭ರಲ್ಲಿ ದಿಂಡಿಗಲ್‌ಗೆ ಜವಾಹರಲಾಲ್ ನೆಹರು ಬರುತ್ತಾರೆಂದು ತಿಳಿದು ತನ್ನೂರಿನಿಂದ ೧೨ಮೈಲಿ ನಡೆದು ಅವರ ಸಿಂಹವಾಣಿಯಿಂದ ಸ್ಫೂರ್ತಿಗೊಂಡವರು. ಶಾಲೆಗೆ ತಿಲಾಂಜಲಿ ನೀಡಿ ಹೋರಾಟದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾಗಿ ಹೇಳುತ್ತಿದ್ದ ಸುಬ್ಬಯ್ಯ, ಕುಟುಂಬದ ವ್ಯಾಪಾರದ ನಿಮಿತ್ತ ಬೆಂಗಳೂರು ಸೇರಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಪೊಲೀಸರಿಂದ ಪೆಟ್ಟುತಿಂದು ಬಂಧನಕ್ಕೊಳಗಾಗಿ ಜೈಲು ಸೇರಿದಾಗ ಅಲ್ಲಿ ಚೆಂಗಲರಾಯರೆಡ್ಡಿ, ದೀನದಯಾಳು ನಾಯ್ಡು, ಭಾಷ್ಯಂ, ಟಿ. ಸುಬ್ರಮಣ್ಯಂ ಮತ್ತಿತರರ ಸ್ನೇಹ ಮಾರ್ಗದರ್ಶನ ಸಿಗುತ್ತದೆ. ಜೈಲಿನಿಂದ ಹೊರ ಬಂದವರು 'ಹರಿಜನ ಪತ್ರಿಕೆ' ಸರಬರಾಜಿನಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳುಸುತ್ತಾರೆ. ೧೯೪೭ರಲ್ಲಿ ಮೈಸೂರು ಚಲೋ ಮತ್ತು ಪುದುಕೋಟೆ ಚಳುವಳಿಗಳಲ್ಲೂ ಭಾಗವಹಿಸಿದವರು ತದನಂತರ ಚಿಕ್ಕಮಗಳೂರಿಗೆ ತಮ್ಮ ಬೆಣ್ಣೆ–ತುಪ್ಪ ವ್ಯಾಪಾರದ ನಿಮಿತ್ತ ಬಂದು ನೆಲೆಸಿ ಬೆಣ್ಣೆಸುಬ್ಬಯ್ಯ ಎಂದೇ ಹೆಸರಾಗುತ್ತಾರೆ.



## ಗಾಂಧೀಜಿ ಕಾರು ಏರಿದ ತರುಣ

ವಾಣಿಜ್ಯೋದ್ಯಮಿ ಕುಟುಂಬದ ಎಂ. ಕೆ. ಶ್ರೀನಿವಾಸಶೆಟ್ಟಿ ೧೯೪೦ರ ಸಾಲಿನಲ್ಲಿ ಮೈಸೂರಿನಲ್ಲಿ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ. ೧೯೪೨–೪೩ರ ವರ್ಷದಲ್ಲಿ ಮಹಾತ್ಮಾ ಗಾಂಧೀಜಿ ಅವರು ಮೈಸೂರಿಗೆ ಭೇಟಿ ನೀಡಿ ಸ್ವಾತಂತ್ರ್ಯ ಹೋರಾಟ ಕುರಿತಂತೆ ಭಾಷಣ ಮಾಡುತ್ತಾರೆ. ಶ್ರೀನಿವಾಸ ಶೆಟ್ಟರು ಗೆಳೆಯರೊಂದಿಗೆ ಗಾಂಧೀಜಿ ನೋಡಲು ಹೋಗಿರುತ್ತಾರೆ. ರಸ್ತೆಯಲ್ಲಿ ತೆರೆದ ಕಾರಿನಲ್ಲಿ ಪ್ರಯಾಣಿಸುವಾಗ ಆಕಸ್ಮಿಕವಾಗಿ ಇವರಿಗೂ ಸ್ವಲ್ಪ ದೂರ ಗಾಂಧೀಜಿ ಅವರೊಂದಿಗೆ ಹೋಗುವ ಭಾಗ್ಯ ಲಭ್ಯವಾಯಿತ್ತೆಂದು 'ಗುಣ ಗೌರವ'ದಲ್ಲಿ ಲೇಖಕ ಡಾ. ಬೆಳವಾಡಿ ಮಂಜುನಾಥ್ ಉಲ್ಲೇಖಿಸಿದ್ದಾರೆ.

ಗಾಂಧೀಜಿ ಅಂದು ಮೈಸೂರಿನಲ್ಲಿ ಪ್ರಯಾಣಿಸಿದ ಕಾರು ಈಗ ಧರ್ಮಸ್ಥಳದ ಸಂಗ್ರಹಾಲಯದಲ್ಲಿದೆ. ಆ ವರ್ಷ ಪರೀಕ್ಷೆಗಳನ್ನು ವಿಶ್ವ ವಿದ್ಯಾನಿಲಯ ನಡೆಸಲಾಗದೆ ಹೋರಾಟಕ್ಕೆ ಅನಿರೀಕ್ಷಿತವಾಗಿ ಶ್ರೀನಿವಾಸಶೆಟ್ಟರ ಒಂದು ಶೈಕ್ಷಣಿಕವರ್ಷ ಆಹುತಿಯಾಗುತ್ತದೆ. ಶೆಟ್ಟರು ಈ ಸಂಗತಿಗಳನ್ನು ಅಭಿಮಾನದಿಂದ ಹಂಚಿಕೊಳ್ಳುತ್ತಿದ್ದರಾದರೂ ಎಂದೂ ಎಲ್ಲೂ ತಾವು ಸ್ವಾತಂತ್ರ್ಯ ಹೋರಾಟಗಾರರೆಂದು ಕರೆದುಕೊಂಡಿದ್ದು ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ ನಾನು ಕೇಳಿಲ್ಲ.

## ಚಿಕ್ಕಮಗಳೂರು ಕ್ಲಬ್: ಮಾಸ್ತಿ ಅಧ್ಯಕ್ಷ

ಚಿಕ್ಕಮಗಳೂರಿನಲ್ಲಿ ಸ್ವಾಭಿಮಾನದ ಸ್ವಾತಂತ್ರ್ಯದ ಸಂದರ್ಭದಲ್ಲೆ ಆಸಕ್ತಿದಾಯಕವಾದ ಪೂರಕ ಘಟನೆಗಳು ನಡೆದವು.

ಬ್ರಿಟಿಷ್ ಅಧಿಕಾರಿಗಳು ಮತ್ತು ಕಾಫಿ ಬೆಳೆಗಾರರು ಸೇರಿ ಜಿಲ್ಲಾಧಿಕಾರಿಗಳ ಕಛೇರಿ ಸಮೀಪದಲ್ಲೆ 'ಕಡೂರು ಕ್ಲಬ್' ಎಂಬ ಸಂಸ್ಥೆ ಸ್ಥಾಪಿಸುತ್ತಾರೆ. ಮನರಂಜನೆ, ವಿಶ್ರಾಂತಿ, ಕ್ಯಾಂಟೀನ್ ಸೌಲಭ್ಯ ಅವರಿಗಷ್ಟೇ ಮೀಸಲು. ಸಾಮಾನ್ಯ ಭಾರತೀಯರಿಗೆ ಸದಸ್ಯತ್ವ ಇರಲಿ ಆವರಣದೊಳಗೆ ಪ್ರವೇಶವೇ ಇರಲಿಲ್ಲ. ಜಿಲ್ಲಾಧಿಕಾರಿಗೆ ಮಾತ್ರ ಗೌರವ ಸದಸ್ಯತ್ವ ನೀಡಲಾಗುತಿತ್ತು. ಇದರಿಂದ ಬೇಸರಗೊಂಡ ಸ್ಥಳೀಯ ಸ್ವಾಭಿಮಾನಿ ಪ್ರಮುಖ ಬೆಳೆಗಾರರು–ವರ್ತಕರುಗಳು ಸೇರಿ ಪ್ರತ್ಯೇಕವಾಗಿ ಇಂತಹದ್ದೇ ಕ್ಲಬ್ ಆರಂಭಿಸುವ ತೀರ್ಮಾನ ಮಾಡುತ್ತಾರೆ.

೧೯೨೭ರ ಸಂದರ್ಭದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜಿಲ್ಲಾಧಿಕಾರಿಗಳಾಗಿ ಇಲ್ಲಿಗೆ ಬಂದಾಗ 'ಚಿಕ್ಕಮಗಳೂರು ಕ್ಲಬ್' ಪದಾಧಿಕಾರಿಗಳು ಭೇಟಿ ಮಾಡಿ ಗೌರವ ಸದಸ್ಯತ್ವ ಸ್ವೀಕರಿಸುವಂತೆ ಮನವಿ ಸಲ್ಲಿಸುತ್ತಾರೆ. 'ಭಾರತೀಯನಾಗಿ ಸಿಗದ ಸದಸ್ಯತ್ವ ಅಧಿಕಾರಿಯಾಗಿ ಪಡೆಯಲಾರೆ' ಎಂದು ನಿರಾಕರಿಸಿದ್ದಾಗಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ತಮ್ಮ ಆತ್ಮಚರಿತ್ರೆ 'ಭಾವ'ದಲ್ಲಿ ದಾಖಲಿಸುತ್ತಾರೆ. ಮುಂದೆ ಮಾಸ್ತಿ ಅವರು 'ಚಿಕ್ಕಮಗಳೂರು ಕ್ಲಬ್' ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿ ಸ್ವಾಭಿಮಾನದ ಸ್ವದೇಶಿ ಕ್ಲಬ್ ಅನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಹಕರಿಸುತ್ತಾರೆ.

## ಕ್ರಿಕೆಟ್ ರಾಜ್ಯಕ್ಕೆ ಬಂದಿದ್ದೇ ಇಲ್ಲಿ

ಆಟದಲ್ಲೂ ಇಂತಹದ್ದೇ ಸಂದರ್ಭ. ಇಂದು ಭಾರತವನ್ನಷ್ಟೇ ಅಲ್ಲ ಇಡೀ ವಿಶ್ವನ್ನೆ ವ್ಯಾಪಿಸಿ ಹಲವು ದೇಶಗಳಲ್ಲೂ ಆಸಕ್ತಿ ಮೂಡಿಸಿರುವ ಕ್ರಿಕೆಟ್ ರಾಜ್ಯದಲ್ಲೆ ಮೊದಲು ಆರಂಭವಾದದ್ದು ಚಿಕ್ಕಮಗಳೂರಿನಲ್ಲಿ ಎಂದು ಹಿರಿಯ ಕ್ರೀಡಾಪಟು ರಾಮಮೋಹನ್ ಅಭಿಪ್ರಾಯಿಸಿದ್ದಾರೆ. ಇಲ್ಲಿಯ ತಂಪು ಹವೆ, ಸುಂದರ ಬೆಟ್ಟ, ಕಾಡಿನ ಸುಂದರ ಕಾಫಿನಾಡಿನ ಮೈದಾನಗಳು ಉತ್ಸಾಹಿ ಇಂಗ್ಲಿಷ್‌ರನ್ನು ಆಕರ್ಷಿಸಿದ್ದು, ಅವರೊಂದಿಗೆ ಕ್ರಿಕೆಟ್ ಆಟವೂ ಚಿಕ್ಕಮಗಳೂರನ್ನು ಪ್ರವೇಶಿಸಿತಂತೆ. ೧೯ನೆಯ ಶತಮಾನದ ಆರಂಭದಲ್ಲೆ ಇಲ್ಲಿ ಕ್ರಿಕೆಟ್ ಪ್ರಚಲಿತವಿತ್ತು.

## ರಾಣಾ ಹೆಸರಿನಲ್ಲಿ ಕ್ರೀಡಾ ತಂಡ:

ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದ ಮೈದಾನ, ಬೇಲೂರು ರಸ್ತೆಬದಿಯ ಖಾಲಿ ಜಾಗಗಳಲ್ಲಿ ಬ್ರಿಟಿಷ್ ಯುವಕರು ವಿಶೇಷವಾಗಿ ಕ್ರಿಕೆಟ್ ಆಡುತ್ತಿದ್ದರು. ಸ್ಥಳಿಯ ಯುವಕರು ಆಕರ್ಷಿತರಾಗಿ ಜೊತೆಗೂಡುತ್ತಾರೆ. ಆದರೆ ಬ್ರಿಟಿಷರು ಸ್ಥಳಿಯರನ್ನು ಕಡೆಗಣಿಸುತ್ತಾರೆ. ಇದರಿಂದ ಬೇಸರಗೊಂಡ ಕೆಲವರು ಕ್ರಿಕೆಟ್ ತೊರೆಯುತ್ತಾರೆ. ೧೯೪೦ರ ದಶಕದಲ್ಲಿ ಕ್ರೀಡೆಯ ಬಗ್ಗೆ ಹುಚ್ಚು ಹಚ್ಚಿಕೊಂಡಿದ್ದ ರಾಜಾಅಯ್ಯಂಗಾರ್, ಎಸ್. ಬಿ. ಮುಳ್ಳೇಗೌಡ, ಟೀಕಾಚಾರ್, ಪುಷ್ಪರಾಜ್, ಚಂದ್ರಶೇಖರ್ ಮತ್ತಿತರ ಬಾಲ ಕ್ರೀಡಾಪಟುಗಳು ಸ್ವದೇಶಿಯರಿಗೆ ಸೀಮಿತಗೊಂಡಂತೆ ಕ್ರಿಕೆಟ್, ಫುಟ್‌ಬಾಲ್ ಪ್ರೌಢಶಾಲಾ ತಂಡ ಕಟ್ಟುತ್ತಾರೆ. ಶಾಲೆಯಿಂದ ಹೊರ ಬಿದ್ದವರೂ ಸೇರಿಕೊಂಡು ಪಂದ್ಯಗಳಲ್ಲಿ ಭಾಗವಹಿಸಲು ವಿವಿಧೆಡೆ ಪ್ರವಾಸವನ್ನೂ ಮಾಡುತ್ತಾರೆ. ೧೯೪೭ರಲ್ಲಿ ದೇಶಭಕ್ತ



ರಾಣಾಪ್ರತಾಪ ಸಿಂಹ ಸ್ಮರಣೆಗಾಗಿ 'ರಾಣಾ ಸ್ಪೋರ್ಟ್ಸ್ ಕ್ಲಬ್' ಎಂದು ತಂಡಕ್ಕೆ ಚಂದ್ರಶೇಖರ್ ನಾಮಕರಣ ಮಾಡಿದ್ದನ್ನು ಮುಳ್ಳೇಗೌಡರು ಮೆಲುಕು ಹಾಕುತ್ತಿದ್ದರು.

## ಐಎನ್‌ಎಗೆ ಬೆಂಬಲ : ಸುಭಾಷ್ ಬಂದಿದ್ದರಾ?

೧೯೪೩ರಲ್ಲಿ ಸುಭಾಷಚಂದ್ರ ಬೋಸರು ಇಂಡಿಯನ್ ನ್ಯಾಷನಲ್ ಆರ್ಮಿ (ಐ.ಎನ್.ಎ.) ರಚಿಸಿದಾಗ ಚಿಕ್ಕಮಗಳೂರಿನ ಅನೇಕ ಮಹಾನೀಯರು ಗುಪ್ತವಾಗಿ ಕಾರ್ಯನಿರ್ವಹಿಸಿ ಹಣ ಸಂಗ್ರಹಿಸಿ ಸಂಗ್ರಾಮಕ್ಕೆ ಒತ್ತಾಸೆಯಾಗಿದ್ದರಂತೆ.

ಕಡೂರಿಗೆ ಸುಭಾಷ್‌ಚಂದ್ರ ಬೋಸರು ಬಂದಿದ್ದರೆಂಬ ಪ್ರಜಾವಾಣಿ ಪತ್ರಿಕೆಯ ಲೇಖನ ಬೆನ್ನು ಹತ್ತಿದ ನಾನು ಆಗಸ್ಟ್ ತಿಂಗಳನಲ್ಲಿ ಕ್ಷೇತ್ರ ಕಾರ್ಯದಲ್ಲಿ ತೊಡಗಿದ್ದು ಮಚ್ಚೇರಿಯ ೯೩ರ ವಯೋವೃದ್ಧ ಎಂ. ಎಸ್. ವೆಂಕಟೇಶ ಅಯ್ಯಂಗಾರ್‌ರನ್ನು ಭೇಟಿ ಆಗಿದ್ದೆ. 'ಹೌದು ಸುಭಾಷಚಂದ್ರ ಬೋಸ್ ಕಡೂರಿಗೆ ಬಂದಿದ್ದರು' ಎಂದಿದ್ದರು.

'ಬಾಲಕನಾಗಿದ್ದ ನಾನು ಪೆಪ್ಪರಮೆಂಟ್ ಕೊಡುತ್ತಾರೆಂಬ ಆಸೆಗಾಗಿ ಅಲ್ಲಿಗೆ ಹೋಗಿದ್ದೆ. ಬೋಸರ ಜೊತೆಗೆ ಕ್ಯಾಪ್ಟನ್‌ಲಕ್ಷ್ಮೀ ಬಂದಿದ್ದರು. ಹೆಣ್ಣು ಹುಲಿಯಂತೆ ಘರ್ಜಿಸಿ ಮಾತನಾಡಿದರು. ಅವರ ಜೊತೆಗೆ ಸರೋಜಿನಾಯ್ಡು ಸಹ ಮಾತನಾಡಿದರು. ಶಿವಮೊಗ್ಗ ಹಿಂದೂ ಮಹಾಸಭಾದ ಮುಖಂಡ ಭೂಪಾಳಂ ಚಂದ್ರಶೇಖರಯ್ಯ ಇವರ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ವೀರ ಸಾವರ್ಕರ್ ಜೊತೆಗಿದ್ದರಾದರೂ ಭಾಷಣ ಮಾಡಲಿಲ್ಲ' ಎಂದು ಉತ್ಸಾಹದಿಂದ ಹೇಳಿಕೊಂಡರು.

## ರಕ್ತದಲ್ಲಿ ಸಹಿ

'ಭಾರತ ಮಾತಾಕೀ ಜೈ' ಘೋಷಣೆಯನ್ನು ಜನರು ಕೂಗುತ್ತಿದ್ದರು. ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರತಿಜ್ಞೆ ಮಾಡಿ ಬಿಳಿಹಾಳೆಯ ಮೇಲೆ ರಕ್ತದಿಂದ ಸಹಿ ಮಾಡುವಂತೆ ಅಂದು ಕರೆ ನೀಡಿದ ನೇತಾಜಿ, ತಾವೂ ಹೆಬ್ಬೆಟ್ಟಿನಿಂದ ರಕ್ತ ತೆಗೆದು ಸಹಿ ಮಾಡಿದರು. ರಕ್ತ ಕಂಡು ಗಾಬರಿಯಾಗಿ ನಾವೆಲ್ಲ ಹುಡುಗರು ಹೆದರಿ ಓಡಿದಾಗ ಭೂಪಾಳಂ ಹೆದರಬೇಡಿರೆಂದು ನಮ್ಮಲ್ಲಿ ಧೈರ್ಯ ತುಂಬಿ ಎಕ್ಸಟ್ರಾ ಪೆಪ್ಪರಮೆಂಟ್ ಕೊಟ್ಟು ಸಂತೈಸಿದರು. ನೇತಾಜೀ ದೇಶ ಭಕ್ತಿಗೀತೆ ಹಾಡಿದ್ದು ನಂತರ ಅದನ್ನು ಕನ್ನಡೀಕರಿಸಿ 'ಬಾ ಹಿಂದೂ


ವೀರ, ಭಿನ್ನಭಾವ ಬಿಟ್ಟು ಬಾರಯ್ಯ, ಭಾರತಾಂಬೆ ಸೌಖ್ಯಕ್ಕಾಗಿ ಎದ್ದು ನಿಲ್ಲಯ್ಯ...' ಎಂಬ ಹಾಡನ್ನು ಹಾಡಿದ್ದರೆಂದು ವೆಂಕಟೇಶ ಅಯ್ಯಂಗಾರ್ ತಾವೂ ಹಾಡು ಹೇಳಿದ್ದು ಕೇಳಿ ಅವರ ನೆನಪಿನ ಶಕ್ತಿಗೆ ಅಚ್ಚರಿಯಾಯಿತು.

'ತಾವು ಸ್ವಾತಂತ್ರ್ಯ ಹೋರಾಟಗಾರರಲ್ಲ. ೧೨ವರ್ಷ ವಯಸ್ಸಿನಿಂದಲೇ ಪೆಪ್ಪರಮೆಂಟಿಗಾಗಿ ಅನೇಕ ಕಾಂಗ್ರೆಸ್ ಸಭೆಗಳಿಗೆ ಹೋಗಿದ್ದೆ' ಎಂದು ಪ್ರಾಮಾಣಿಕವಾಗಿ ಹೇಳಿಕೊಂಡಿದ್ದು ಅವರ ಬಗೆಗಿನ ಗೌರವವನ್ನು ಹತ್ತುಪಟ್ಟು ಹೆಚ್ಚಿಸಿತು. ಆದರೆ ಸುಭಾಷ್‌ಚಂದ್ರ ಬೋಸ್, ವಿನಾಯಕ ದಾಮೋದರ್ ಸಾವರ್ಕರ್ ಚಿಕ್ಕಮಗಳೂರು ಜಿಲ್ಲೆಗೆ ಭೇಟಿ ನೀಡಿದ ಯಾವುದೇ ದಾಖಲೆ, ಮಾಹಿತಿ, ಉಲ್ಲೇಖ ಈವರೆಗೂ ಲಭ್ಯವಾಗಿಲ್ಲ.










## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |